A Circumnavigation to the world of Dance and Performing Arts : A complete Journal

# ನೂಪುರ ಭ್ರಮರಿ

RNI No :KARKAN/2009/29752

ISSN No : 2321-2519

**ಮಾಘ– ಫಾಲ್ಗುಣ 2015**

**ಸಂಪುಟ : 9 ಸಂಚಿಕೆ : 1**

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ನಾರಾಯಣ ಭಟ್ ಬಿ.ಜಿ
ನೆರವು : ಸಾವಿತ್ರಿ ಭಟ್ ಮತ್ತು ಸನ್ಮಿತ್ರರು
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.)

ಆವರಣ ಪುಟ : ನಾಗರಾಜ್ ವೈದ್ಯ ಹೆಗ್ಗಾರ್

ಮುದ್ರಣ : ಲಾವಣ್ಯ ಪ್ರಿಂಟರ್ಸ್, ಬೆಂಗಳೂರು

## ಶಿಶಿರ ಶೃಂಗಾರ

## ಅಂತರಂಗ.....


- ಮಂಜೀರ ....... 2
- ದೀವಟಿಗೆ : ಹಳ್ಳಿಯೊಳಗಿನ ಹಿರಿಯ ಪ್ರಪಂಚ : ಕೆರೆಮನೆ ರಾಷ್ಟ್ರೀಯ ನಾಟ್ಯೋತ್ಸವ....... 4
- ಸಂಪಾದಕರ ಡೈರಿಯಿಂದ....... 7
- ಹಸ್ತ ಮಯೂರಿ : ಗರುಡಹಸ್ತ....... 11
- ಲಲಿತಲಹರಿ : ನಾಟ್ಯಶಾಸ್ತ್ರಕಥನಮಾಲಿಕೆ....... 12
- ದೀವಟಿಗೆ : ರಂಗದ ಅಂತರಂಗದೆಡೆಗೆ ಸಾರ್ಥಕ ಪ್ರಯತ್ನ : ನೃತ್ಯಾಂತರಂಗ....... 18
- ನಿಮ್ಮ ಬರೆಹ ನಮ್ಮ ಓದು ....... 20
- ಲೋಕ ಭ್ರಮರಿ : ಶ್ರೀರಾಮಾಯಣ ಮಹಾಭಾರತದಲ್ಲಿ ಪಿತಾಪುತ್ರ ಸಂಬಂಧ....... 21
- **Guidelines for submitting the Dance Research Articles**....... 23
- ಭರತನ ನಾಟ್ಯಶಾಸ್ತ್ರ ಹಾಗೂ ನಟುವಾಂಗ ಕಲಿಕೆಯ ದಿಕ್ಕಿನಲ್ಲೊಂದು ಹೊಸಹೆಜ್ಜೆ....... 24


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in **NOOPURA BHRAMARI** are their own, not of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 1ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.




ಶಂಭುಹೆಗಡೆಯವರ ಹೆಸರಿನಲ್ಲಿ ನಡೆಯುವ ಕೆರೆಮನೆ ರಾಷ್ಟ್ರೀಯ ನಾಟ್ಯೋತ್ಸವ ವರ್ಷವರ್ಷವೂ ತನ್ನ ಅಸ್ತಿತ್ವವನ್ನು ಸಹೃದಯರ ವಲಯದಲ್ಲಿ ಗಟ್ಟಿಗೊಳಿಸಿಕೊಳ್ಳುತ್ತಲಿದ್ದು; ಕಲೆಯ ಸವ್ಯಾಪಸವ್ಯಗಳ ಕುರಿತು ಹಲವು ವಿಶ್ಲೇಷಣೆಗಳನ್ನು ಹುಟ್ಟುಹಾಕುತ್ತಿರುವುದು ನಿಜಕ್ಕೂ ಅಭಿನಂದನೀಯ ವಿಚಾರ. ಅವುಗಳ ಪೈಕಿ ಈ ಸಲ ವಿಮರ್ಶೆಗೆ ಒಪ್ಪಿದ ಮೂರು ವಿಚಾರಗಳು ಆಸ್ವಾದನೆಯ ನೆಲೆಯಲ್ಲಿ ಪ್ರಸ್ತುತ ಕಾಲದ ನೃತ್ಯ–ನಾಟ್ಯಾದಿಗಳ ನೆಲೆಬೆಲೆಯನ್ನು ಅರ್ಥೈಸಿಕೊಳ್ಳಲು ಉತ್ತಮ ಸಲಕರಣೆಗಳಾಗಿದ್ದಾವೆ ಎಂಬ ಕಾರಣದಿಂದ ಅವುಗಳನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಕೂಡಿಯಾಟ್ಟಂ– ಪ್ರಪಂಚದಲ್ಲೇ ಎಲ್ಲದಕ್ಕಿಂತಲೂ ಹಳೆಯ, ಹಿರಿಯ, ಬಹುಪ್ರಾಚೀನ ಕಲೆಯೆಂದು ಹೆಸರಾದ ಕೇರಳಮೂಲದ ಈ ಪ್ರದರ್ಶಕ ಕಲಾಪ್ರಕಾರದ ಕುರಿತು ಸಾಕಷ್ಟು ಕೇಳಿ, ಯೂಟ್ಯೂಬ್‌ಗಳಲ್ಲಿ ನೋಡಿ ಬಲ್ಲೆವಷ್ಟೇ. ಸ್ವಯಂ ಕಲಾವಿದರೇ ಹೇಳುವಂತೆ ಸುಮಾರು 2000 ವರುಷಗಳ ಪ್ರಾಚೀನ ಪರಂಪರೆಯಿದೆ ಇದಕ್ಕಿದೆ ! ಅಂದರೆ ಒಂದೋ ಭರತನ ನಾಟ್ಯಶಾಸ್ತ್ರದ ರಚನೆಗಿಂತಲೂ ಹಳೆಯದು ಅಥವಾ ನಾಟ್ಯಶಾಸ್ತ್ರ ಕಾಲದ ಹಲವು ಆಂಗಿಕಾದಿ ವಿಶೇಷಗಳನ್ನೆ ಇಂದಿಗೂ ಉಳಿಸಿಕೊಂಡು ಬಂದ ಕಲೆಯೆಂದೆ ಮುದ್ರೆಯೊತ್ತಿಸಿಕೊಂಡಿದೆ ಅಂದಂಗಾಯ್ತು !

ಕರ್ನಾಟಕದ ನೃತ್ಯಸನ್ನಿವೇಶಗಳಲ್ಲಿ ಕೂಡಿಯಾಟ್ಟಂ ನೋಡಲಿಕ್ಕೆ ಸಿಗುವುದು ಕಡಿಮೆಯೇ ಆದರೂ, ಅದಾಗಲೇ ನೋಡಿದವರು ನೋಡುವವರಿಗೆ ಹೇಳಬಲ್ಲ ಕಿವಿಮಾತೆಂದರೆ – ಅಸಾಮಾನ್ಯ ತಾಳ್ಮೆ, ಮತ್ತು ಆವರೆಗೆ ಕಾಣದ ಕಲೆಯೊಂದನ್ನು ತಮ್ಮ ಪ್ರೇಕ್ಷಕತ್ವಕ್ಕೆ ದಕ್ಕಿಸಿಕೊಳ್ಳಲೇಬೇಕೆಂಬ ಹಟವಿದ್ದರಷ್ಟೇ ಸ್ವಲ್ಪ ಮಟ್ಟಿಗೆ ಸಹನೀಯ ಆಸ್ವಾದನೆಯನ್ನು ಕೊಟ್ಟೀತು ಅಷ್ಟೇ. 'ಕಾಂಬ ಕಣ್ಣಲ್ಲಡಗಿದೆ ಸೌಂದರ್ಯ' ಎಂಬ ನುಡಿಗಟ್ಟನ್ನೇ ಆತು ಕೂಡಿಯಾಟ್ಟಂನ್ನು ಆಸಕ್ತಿಯಿಂದ ನೋಡಿದರೂ ಬಹಳ ಕಾಲ ನೋಡಿಸಿಕೊಂಡು ಹೋಗುವ ಸ್ವಭಾವಸಹಜ ತಾಕತ್ತು ಇಲ್ಲದಂತೆಯೇ ತೋರುತ್ತದೆ.

ಅಷ್ಟಕ್ಕೂ ನಾಟ್ಯಶಾಸ್ತ್ರಕ್ಕೂ ಹಿಂದಿನದು ಎಂದು ಅಷ್ಟೆಲ್ಲಾ ಕೊಚ್ಚಿಕೊಳ್ಳುವ ಹೆಚ್ಚುಗಾರಿಕೆ ಇದಕ್ಕೆ ಹೊಂದಿಕೆಯಾಗುವುದಿಲ್ಲವೆಂದೇ ಅನಿಸಿದರೆ ತಪ್ಪಿಲ್ಲ. ಕಾರಣ, ಆಂಗಿಕಾದಿ ಚಲನೆಗಳಲ್ಲಿ ಕಾಣದ ವಿಸ್ತಾರಪ್ರಜ್ಞೆ, ಒಂದೊಂದು ಕಥಾಸನ್ನಿವೇಶದ ಪದ–ಪದರವನ್ನೂ ಬಿಡಿಸಿಡುವಂತೆ ಎಳೆದೆಳೆದು ಅಭಿನಯವನ್ನೊ ವಿಳಂಬಗತಿಯಲ್ಲೇ ಕಾಣಿಸುವ ಹಟ, ಹಿಮ್ಮೇಳದಲ್ಲಿ ಕಿವಿಯ ತಮಟೆಗೇ ನೇರ ಬಡಿಯುವ ಬೇರೆ ಶ್ರುತಿವಾದ್ಯ ಸದ್ದೊಂದಿಲ್ಲದ ಅಭಿವ್ಯಕ್ತಿ, ಕೆಲವೊಂದು ಮಾತು ಮತ್ತು ಮುಖ–ಕಣ್ಣಿನ ಸೀಮಿತ ಅಭಿನಯ ಹೊರತುಪಡಿಸಿದರೆ ಕಥಾಸನ್ನಿವೇಶವನ್ನು ಕಣ್ಣಿಗಿಂಪಾಗುವಂತೆ ಕೊಂಡುಹೋಗದ ರಸವಿಹೀನ ಸನ್ನಿವೇಶಗಳ ಅಧಿಕತೆ, ಆಹಾರ್ಯದಲ್ಲಿ ಅಯಾಚಿತವಾಗಿ ಕಣ್ಣಿಗೆಟುಕುವ ಅಭಾಸಗಳು, ಬರಿಯ ಕೆಲವೊಂದು ಹಸ್ತ–ಮುದ್ರೆಗಳಲ್ಲೇ ಕಥಾಭಾಗವನ್ನು ಸಂವಹಿಸುತ್ತೇವೆಂಬ ಪರಂಪರಾನಿಷ್ಠೆ...ಒಟ್ಟಿನಲ್ಲಿ ನಾಟ್ಯಶಾಸ್ತ್ರವೆಂಬ ಬೃಹತ್ ಕಲಾವಿಶ್ವಕೋಶದ ಸಮಕಾಲೀನ ಎಂಬುದರ ಸುಳಿವೇ ಕಾಣದ ಕೂಡಿಯಾಟ್ಟಂಗೆ ಸಾಕಷ್ಟು ಕಾಯಕಲ್ಪ ಬೇಕು ಎಂದು ಪ್ರೇಕ್ಷಕ ಸಹೃದಯನಿಗೆ ಅನ್ನಿಸಿದರೆ ಖಂಡಿತಾ ತಪ್ಪಿಲ್ಲ.

ಆದಾಗ್ಯೂ ಇಷ್ಟೊಂದು ಶತಮಾನಗಳ ಕಾಲ ಈ ಕಲೆ ಯಥಾವತ್ತು ಬಾಳಿ ಬಂದುದಾದರೂ ಹೇಗೆ ಎಂಬುದೇ ಬಹು ದೊಡ್ಡ ಅಚ್ಚರಿ ! ಕಾರಣ, ಸ್ಥಾಯಿಭಾವ ಪೋಷಣೆಯಾಗಲೀ, ರಸಾದ್ಭುತ ಪರಿಕಲ್ಪನೆಯಾಗಲೀ ಅಷ್ಟಾಗಿ ತೋರದೆ, ಕಾಲಕಾಲಕ್ಕೆ ಪರಿಷ್ಕೃತವಾಗದೆ, ಆನಂದಕ್ಕೆ ಆಸ್ಪದವನ್ನು ಕನಿಷ್ಠಮಟ್ಟದಲ್ಲಿ ನೀಡುವ, ಪ್ರೇಕ್ಷಕರ ತಾಳ್ಮೆ ಪರಿಕಿಸುವ ಕಲೆಗೆ ಹೆಚ್ಚಿನ ಆಯುಷ್ಯವಿಲ್ಲ ಮಾತ್ರವಲ್ಲ ಸಹೃದಯ ಜನರಂಜನಿಯಲ್ಲ ಎಂಬ ಶಾಸ್ತ್ರವಾಕ್ಯವನ್ನು ಎಷ್ಟೇ ಬಾರಿಗೆ ಹೇಳಿಕೊಂಡರೂ ಇದೊಂದು ಕಲೆ ಮಾತ್ರ ಹೇಗೆ ಉಳಿದವಕ್ಕಿಂತ ಭಿನ್ನ– ವಿಶೇಷವಾಗಿಯೇ ಕಾಣುತ್ತದೆ. ಅಷ್ಟಕ್ಕೂ ಇದರ 'ಕಾರ್ಬನ್‌ಕಾಪಿ'ಗಳಲ್ಲಿ ದೀರ್ಘಾಯುಷ್ಯದ ಗುಟ್ಟನ್ನು ಹೇಳುವ ಅಂಶವೂ ಕಾಣಸಿಗುವುದಿಲ್ಲ.

ಇದು ಪರಂಪರೆಯ ನಿಷ್ಠೆಯಲ್ಲಿ ಕಲೆಯ ಒಟ್ಟಂದಕ್ಕೆ ಅಗತ್ಯವಾದ ಆಸ್ವಾದನೆಯ ಪ್ರಜ್ಞೆಯನ್ನು ಕಡಿಮೆಗೊಳಿಸಿಕೊಳ್ಳುತ್ತಿರುವುದಕ್ಕೆ ಉದಾಹರಣೆಯಾದರೆ ಮತ್ತೊಂದು ನಿದರ್ಶನ – ಕಲಾರಂಜನೆಗಾಗಿ ತಮ್ಮ ಮೂಲವನ್ನೇ ಮರೆತು, ಕಾಲದ ಓಟದಲ್ಲಿ ಜನಪ್ರಿಯವಾದ ಒಂದು ಸೋದರಕಲೆಯ ಮೂಲಾಂಶಗಳನ್ನು ತನ್ನೊಳಗೆ ಸೇರಿಸಿಕೊಂಡು ಕ್ರಮೇಣ ತನ್ನ ನೈಜ ಅಸಿತ್ತ್ವವನ್ನೇ ಕಳೆದುಕೊಂಡು ತೊತ್ತಾಗುತ್ತಿರುವುದು. ಅದುವೇ ಮೇಲತ್ತೂರು ಭಾಗವತ ಮೇಳ. 'ಅತಿಯಾದರೆ ಅಮೃತವೂ ವಿಷ' ಎಂಬುದನ್ನು

ಕಲೆಗೆ ಅನ್ವಯಿಸಿ ಹೇಳುವುದಾದಲ್ಲಿ ಇವೆರಡೂ ಉದಾಹರಣೆಗಳು ಸೂಕ್ತವಾಗಿ ಹೊಂದಿಕೊಂಡಾವು. ಆಂಧ್ರದಿಂದ ವಲಸೆ ಬಂದು ತಮಿಳುನಾಡಿನಲ್ಲಿ ನೆಲೆಯಾದ ಭಾಗವತಮೇಳವು 'ತೆಲುಗುದೇಶದಲ್ಲಿ ಒಡಮೂಡಿದ್ದು' ಎಂದು ಊರ ಹೆಸರಿಗಷ್ಟೇ ಸೀಮಿತವಾದ ಬೋರ್ಡ್ ಅಂಟಿಸಿಕೊಂಡು ತಿರುಗಾಡುವ ಬಡಪಾಯಿಯೆಂದು ಕಂಡರೆ ಖಂಡಿತಾ ಅತಿಶಯವಲ್ಲ. ಪ್ರಸ್ತುತ ದಿನಗಳಲ್ಲಂತೂ ತನ್ನ ಆಂಗಿಕಾದಿ ಅಭಿನಯಗಳಲ್ಲಿ ಭರತನಾಟ್ಯವನ್ನೇ ಇಂಚಿಂಚೂ ಹೋಲುವ ಈ ಭಾಗವತಮೇಳದಲ್ಲಿ ಸ್ವತಃ ತೆಲುಗು ಬಲ್ಲವರು ಕಡಿಮೆ ಎಂದರೆ ಅವರ ಕಲಾಮೂಲದ ಪ್ರಜ್ಞೆ ಇನ್ನೆಷ್ಟು ಮಸುಳಿಸಿದ್ದಿರಬೇಕು ಯೋಚಿಸೋಣ. ಭರತನಾಟ್ಯಕ್ಕೆ ಕೆಲವು ತಲೆ, ಕಾಲು, ಬಾಲ ಸೇರಿಸಿದರೆ ಅದು ಭಾಗವತ ಮೇಳವೇ ಎಂಬಷ್ಟರ ಮಟ್ಟಿಗೆ ಕಾಣುವ ಈ ಕಲೆ ಭರತನಾಟ್ಯ ನೃತ್ಯರೂಪಕದಿಂದಾಚೆಗಿನ ವಿಶೇಷ ಅಭಿವ್ಯಕ್ತಿಯನ್ನೇನೂ ನೀಡುವುದಿಲ್ಲ ಎಂಬುದು ನಿಜಕ್ಕೂ ದುಃಖದ ವಿಷಯ. ಹಾಗಾಗಿಯೇ ಭಿನ್ನತೆಗಿಂತಲೂ ಸಾಮ್ಯತೆಯೇ ಹೆಚ್ಚಾಗಿ 'ಇದು ಭರತನಾಟ್ಯವೇ ಸೈ' ಎಂದು ಯಾರೇ ಆದರೂ ಗಣಿಸಿಯಾರು.

ಕಾಲಕ್ಕೆ ತಕ್ಕಂತೆ ಭಾಗವತಮೇಳದ ಕಲಾವಿದರು ಭರತನಾಟ್ಯವನ್ನು ಕಲಿಯುವುದೇನೋ ಸರಿ. ಆದರೆ ಅದನ್ನೇ ಅನುಕರಿಸಿ ಅಭಿನಯ ಮಾಡುತ್ತಾರೆಂಬುದು ಎಷ್ಟು ನಿಜವೋ; ಭರತನಾಟ್ಯವೂ ಭಾಗವತ ಮೇಳದ ನೃತ್ಯವಿಶೇಷಗಳನ್ನು ತನ್ನೊಳಗೆ ಆಪೋಷನ ತೆಗೆದುಕೊಳ್ಳುತ್ತಾ ಅವುಗಳನ್ನು ಅತ್ಯಾಕರ್ಷಕವಾಗಿ ತನ್ನ ಮಾಧ್ಯಮದಲ್ಲಿ ಮೆರೆದು ಮೂಲಪ್ರತಿಗಳನ್ನು ನುಂಗಿ ನೊಣೆಯುತ್ತಿದೆ ಎಂಬುದೂ ಸತ್ಯ. ಇದಕ್ಕೆ ಭಾಗವತಮೇಳದ ತೋಡಯಮಂಗಲ, ಧರು, ತಿಲ್ಲಾನ ಎಲ್ಲವೂ ನಿದರ್ಶನವಾಗಿ ತೋರುತ್ತದೆ. ಒಂದರ್ಥದಲ್ಲಿ 'ಭರತನಾಟ್ಯ ಎಲ್ಲಾ ಕಲೆಗಳಿಗಿಂತ ಶ್ರೇಷ್ಠ. ನಾಟ್ಯಶಾಸ್ತ್ರದ ಅಪರಾವತಾರ" ಎಂಬ ಪೊಳ್ಳು ಯಜಮಾನ್ಯ ಧೋರಣೆಯೂ, ಭರತನಾಟ್ಯಪ್ರೇಮದ ಅಬ್ಬರದ ಪ್ರಚಾರವೂ ಇಂತಹ ಒಂದು ಸ್ಥಿತಿಯನ್ನು ಉಂಟುಮಾಡುವಲ್ಲಿ ಕಾರಣವಾಗಿದೆ. ಸದ್ಯ, ಯಕ್ಷಗಾನ ಅಷ್ಟರಮಟ್ಟಿಗೆ ಪರತಂತ್ರ ಇನ್ನೂ ಹೊಂದಿಲ್ಲವೆಂಬುದು ಕೊಂಚ ಸಮಾಧಾನವೇ ಆದರೂ ಪ್ರಸ್ತುತ ದಿನಗಳ ಬೆಳವಣಿಗೆಗಳು 'ಆ ದಿನಗಳೂ ದೂರವಿಲ್ಲ' ಎಂದು ವಾಸ್ತವತೆಯ ಕಹಿಯನ್ನೂ ಎದುರಿಗಿರಿಸುತ್ತವೆ.

ಕಲೆಯ ನಡುವಿನ ಕೊಡು-ಕೊಳ್ಳುವಿಕೆಗಳು ಸ್ವಾಗತಾರ್ಹವೇ ನಿಜ. ಆದರೆ ಔಚಿತ್ಯವಿಲ್ಲದ್ದು ಯಾವ ಬಗೆಯ ಅಧ್ವಾನಗಳನ್ನು ಸೃಷ್ಟಿಸುತ್ತವೆ ಎಂಬುದು ಭಾಗವತಮೇಳದ ನೆಲೆ-ಹಿನ್ನೆಲೆಯಲ್ಲೇ ಬಿಚ್ಚಿಕೊಂಡಿತಷ್ಟೇ. ಅದಕ್ಕೆ ಹೊಸತೆನಿಸುವ ಮತ್ತೊಂದು ಸೇರ್ಪಡೆ ಕೂಚಿಪುಡಿ-ಭರತನಾಟ್ಯದ ಯುಗಳ ಸಂಯೋಜನೆಯ ಅಸಂಬದ್ಧ 'ಮಿಕ್ಸ್ ಅಂಡ್ ಮ್ಯಾಚ್'. ನೃತ್ಯನಾಟಕ, ನೃತ್ಯರೂಪಕದಲ್ಲಿ ಭಿನ್ನ-ಭಿನ್ನ ಕಲೆಗಳ ಸಂಯೋಜನೆ ವಸ್ತು-ಕಥೆಯ ಹಿನ್ನೆಲೆಯಲ್ಲಿ ಅನಿವಾರ್ಯ. ಆದರೆ ಸೋದರಕಲೆಗಳು ಎಂಬ ಬಾಂಧವ್ಯ ವಿಶೇಷದಿಂದಾಗಿಯೇ ಕಲೆಗಳು ಯಾವುದೇ ಅಗತ್ಯ-ಅನುಕೂಲ-ಸಾಮರಸ್ಯ ಪಡೆಯದೇ ಕಲಾವಿದರ ಅಶಿಸ್ತು, ಎಡವಟ್ಟಿನೊಳಗೆ ರಂಗದಲ್ಲಿ ಒಟ್ಟಿಗೇ ಹಾಸ್ಯಾಸ್ಪದವಾಗುವುದು ಒಳಿತಿನ ಸೂಚನೆಯಲ್ಲ.

ಹಲವು ನೃತ್ಯಪರಂಪರೆಗಳನ್ನು ಏಕಕಾಲಕ್ಕೇ ಪ್ರೇಕ್ಷಕನೆದುರಿಗೆ ತೆರೆದಿಡುವ ಶೂರತ್ವ ಶ್ಲಾಘನೀಯವೇ ಆದರೂ ಕ್ರಮೇಣ ಆಯಾಯ ಕಲಾಂತರಂಗ ಶೂನ್ಯವಾಗುತ್ತದೆ. ಭಿನ್ನ-ಭಿನ್ನ ಕಲಾಪ್ರಪಂಚವನ್ನು ಒಂದೇ ಗುಕ್ಕಿಗೆ ಬಗೆದಿಡುವ ಯತ್ನ ಸಾಂಗತ್ಯವಾಗದಿದ್ದರೆ ಪ್ರೇಕ್ಷಕನ ಚಪ್ಪಾಳೆ ಕೈಗೆ ಮಾತ್ರ ಸೀಮಿತವಾಗುತ್ತದೆ, ಪ್ರಶಂಸೆ ನಾಲಗೆಯ ತುದಿಗಷ್ಟೇ ನಿಲ್ಲುತ್ತದೆ. ನೋಡುಗನ ಕಣ್ಣು-ಮನಸ್ಸನ್ನು ಆರ್ದ್ರ ಮಾಡಿಸುವ ಸಾತ್ತ್ವಿಕಾಭಿವ್ಯಕ್ತಿ ಇಲ್ಲದೆ ಹೋದರಂತೂ ನರ್ತನವು ಅಸಹನೀಯವೆನಿಸಿ ಬುದ್ಧಿ-ಮನಸಿಗೆ ತ್ರಾಸ ನೀಡುತ್ತವೆ. 'ಪ್ರೇಕ್ಷಕರಿಗಿದು ಇಷ್ಟ' ಎಂಬ ಕುಂಟುನೆವ ಮುಂದುಮಾಡಿ ಶಿಸ್ತು, ಸಂಯಮವಿಲ್ಲದೆ ಕಲೆಗೆ ಮನಬಂದ ರೂಪವನ್ನು ಕೊಟ್ಟರೆ ಅದು ಸೃಷ್ಟಿಯ ಬದಲಾಗಿ ಶ್ರಾದ್ಧವೇ ಆದೀತು! ಅಂತೆಯೇ ಪರಂಪರೆಯ ಹೆಸರಿನಲ್ಲಿ ಕಲೆಯ ಪ್ರಾಣಪ್ರತಿಷ್ಠೆ ಮಾಡದಿದ್ದರೆ ಬರಬರುತ್ತ ಜನರ ನಡುವೆ ಇದ್ದೇ ಕಲೆ ಅಸುನೀಗುವುದೇ ಸೈ ! ಇವೆಲ್ಲದನ್ನೂ ಗಮನದಲ್ಲಿರಿಸಿ ಇಂದಿನ ಯಕ್ಷಗಾನಾದಿ ಕಲೆಗಳೂ ಕೊಂಚ ಯೋಚಿಸುವುದು ಒಳಿತು. ಆಗಲೇ ಪ್ರಯತ್ನಗಳು ಸಾರ್ಥಕ.

ಪ್ರೀತಿಯಿಂದ,
**ಸಂಪಾದಕರು**

# ದೀವಟಿಗೆ

## ಹಳ್ಳಿಯೊಳಗಿನ ಹಿರಿಯ ಪ್ರಪಂಚ ಕೆರೆಮನೆ ರಾಷ್ಟ್ರೀಯ ನಾಟ್ಯೋತ್ಸವ

**ಕೆರೆಮನೆ ರಾಷ್ಟ್ರೀಯ ನಾಟ್ಯೋತ್ಸವ– ಗುಣವಂತೆಯಂತಹ ಒಂದು ಹಳ್ಳಿಯ ಆವರಣದಲ್ಲಿ ನಡೆಸುವ ಈ ಉತ್ಸವ ತನ್ನ ಗುಣಮಟ್ಟದ ಮೇಲ್ಮೆ, ಮನೆಯ ವಾತಾವರಣ ನೆನಪಿಸುವ ಹೃದಯಸ್ಪರ್ಶಿ ಆತಿಥ್ಯ, ಬಹುಆಯಾಮದ ಕಲಾ ದೃಷ್ಟಿಕೋನಗಳಿಂದ ತನ್ನ ಈವರೆಗಿನ ಐದು ನಾಟ್ಯೋತ್ಸವಗಳಲ್ಲೇ ದೇಶದ ಎಲ್ಲ ಬಗೆಯ ಕಲಾಪ್ರಪಂಚವನ್ನು ತನ್ನತ್ತ ಸೆಳೆದಿದೆ. ಇಂದಿನ ಕಾಲಕ್ಕೆ ಬಹುಪಾಲು ಎಲ್ಲ ಆಯೋಜಕರೂ ಸೌಕರ್ಯ, ಪ್ರೇಕ್ಷಕರ ಆಶಯ ಗಮನಿಸಿ ಪಟ್ಟಣಗಳತ್ತಲೇ ದೌಡಾಯಿಸುವಾಗ ; ಪುಟ್ಟ ಹಳ್ಳಿಯಲ್ಲಿಯೂ ಜಗತ್ತನ್ನು ಬೆರಗು ಬಿಡುಗಣ್ಣಿನಿಂದ ನೋಡುವ ಅನಾದೃಶ್ಯ ಪರಿಕಲ್ಪನೆಗೆ ಕಾರಣೀಭೂತರಾದ ಎಲ್ಲ ಹಿರಿಯ ಜೀವಗಳೂ ಧನ್ಯರು, ಮಾನ್ಯರು. ಆದ್ದರಿಂದ ಈ ಬಾರಿಯ ಆರನೇ ನಾಟ್ಯೋತ್ಸವದಲ್ಲಿಯೂ (ಫೆಬ್ರವರಿ 6ರಿಂದ 10, 2015) ಪ್ರಬುದ್ಧ ಕಲಾವಿದರು–ವಿಮರ್ಶಕರು–ಸಮಾಜದ ವಿವಿಧ ಸ್ತರದ ಗಣ್ಯರು–ರಾಜಕಾರಣಿಗಳ ದಂಡೇ ನೆರೆದಿದ್ದದ್ದು ಅತಿಶಯವೇನಲ್ಲ.**

**ಭರತನಾಟ್ಯ, ಕೂಚಿಪೂಡಿ, ಕಥಕ್, ಸತ್ರಿಯಾದಂತಹ ನೃತ್ಯಗಳು, ತೆಂಕು–ಬಡಗು ಯಕ್ಷಗಾನಗಳು, ಮೇಲತ್ತೂರು ಭಾಗವತ ಮೇಳ, ಕೂಡಿಯಾಟ್ಟಂ, ಕೂಚಿಪೂಡಿ ಯಕ್ಷಗಾನದಂತಹ ನಾಟ್ಯಪ್ರಬೇಧಗಳು, ನಾಟಕ, ಪುರುಲಿಯಾ ಛಾವು, ವಾದ್ಯ ಜುಗಲ್‌ಬಂದಿ, ವೀಣಾವಾದನ, ಕಬೀರ್ ಮತ್ತು ದ್ರುಪದ್ ಗಾಯನದಂತಹ ಸಂಧ್ಯಾಸಂಭ್ರಮಗಳೊಂದಿಗೆ ಪ್ರತೀ ದಿನದ ಬೆಳಗ್ಗಿನ ಹೊತ್ತು ಪ್ರಾತ್ಯಕ್ಷಿಕೆ, ಉಪನ್ಯಾಸ, ಸಂಜೆಯಲ್ಲಿ ಪ್ರಶಸ್ತಿ ಪ್ರದಾನ, ಸನ್ಮಾನಗಳು.. ಹೀಗೆ ಕಲಾಂಗಣದ ಎಲ್ಲ ಬಗೆಯ ಆಸ್ವಾದರಮ್ಯತೆಯನ್ನೂ ಹೆಸರಾಂತ ಕಲಾವಿದರ ಕೂಡುವಿಕೆಯಲ್ಲಿ ಬಗೆದುಣಿಸುವಂತೆ ಯೋಜಿತವಾಗಿತ್ತು ಐದುದಿನಗಳ ನಾಟ್ಯೋತ್ಸವ. ಬರೆಯಹೊರಟರೆ ಪುಟಗಳೂ ಸಾಲವು. ನೋಡಿಯೇ ಕಣ್‌ತಣಿಯಬೇಕು.**

**ಆ ನಾಟ್ಯೋತ್ಸವದ ಎರಡನೇ ದಿನದ (ಫೆಬ್ರವರಿ 7) ವಸ್ತುನಿಷ್ಠ ವಿಮರ್ಶೆಯೊಂದನ್ನು ವಿಮರ್ಶಕರಾದ ಜಿ.ಎನ್.ಅಶೋಕವರ್ಧನರು ನೂಪುರ ಭ್ರಮರಿಯೊಂದಿಗೆ ಹಂಚಿಕೊಂಡಿದ್ದಾರೆ. ಅಂತೆಯೇ ಒಂದಷ್ಟು ನಾಟ್ಯೋತ್ಸವದ ಹಿರಿಮೆ–ಗರಿಮೆಗಳನ್ನು ನೆನಪಿಸುವ ಮಾತು–ಛಾಯೆಗಳ ಗುಚ್ಛವೂ ಜೊತೆಗಿದೆ. ಸಂಪಾದಕೀಯದ ಸಾಲುಗಳಲ್ಲಿಯೂ ಕೆಲವು ಪ್ರಸ್ತುತಿಗಳ ಚರ್ಚೆ ನಡೆದಿದೆ. ಒಟ್ಟಿನಲ್ಲಿ ಹಳ್ಳಿಯೊಂದರ ಹಸಿರಿನೊಳಗೆ ನಾಟ್ಯೋತ್ಸವದ ನೆಪದಲ್ಲಿ ಹಲವು ಕಲಾಕೋನಗಳು ಅನಾವರಣವಾಗಲು ಆಧಾರಸ್ವರೂಪರಾದ ಕೆರೆಮನೆ ಶಿವಾನಂದ ಹೆಗಡೆ ಮತ್ತು ಅವರ ಕುಟುಂಬ, ಶ್ರೀಮಯ (ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ) ಪ್ರಮುಖರು ನಿಜಕ್ಕೂ ಅಭಿನಂದನಾರ್ಹರು.**

...ದಿನದ ಮೊದಲ ಗೋಷ್ಠಿ ಕೆರೆಮನೆ ಶಿವರಾಮ ಹೆಗಡೆ ರಂಗಮಂದಿರದಲ್ಲಿ– ಕರ್ನಾಟಕ ಸಾಂಸ್ಕೃತಿಕ ವೇದಿಕೆಯ ಸಂಚಾಲಕ ಎಸ್.ಎನ್. ಪಂಜಾಜೆಯವರು ಉದ್ಘಾಟಿಸಿದ ಆ ಗೋಷ್ಠಿಯಲ್ಲಿ, ಉತ್ಸವದ ಪೂರ್ಣ ಸಮರ್ಪಣೆಗೆ ಪಾತ್ರರಾದ ಡಾ.ಮಾಯಾರಾವ್ (–ಬಿ.ಎನ್. ಮನೋರಮಾ) ಅಲ್ಲದೆ, ಯು.ಆರ್.ಅನಂತಮೂರ್ತಿ (–ಕೆ.ವಿ ಅಕ್ಷರರ ಲಿಖಿತ ಭಾಷಣ, ಓದಿದವರು ಲಕ್ಷ್ಮೀನಾರಾಯಣ ಕಾಶಿ), ಮೂಡ್ಕಣಿ ನಾರಾಯಣ ಹೆಗಡೆ (–ನಾರಾಯಣ ಭಟ್ಟ ಸಂತೆಗುಳಿ) ಹಾರಾಡಿ ರಾಮ ಗಾಣಿಗರ (–ಕೆ.ಎಂ. ಉಡುಪ) ಸಾರ್ಥಕ ಸ್ಮರಣೆಯಾದಂತಿತ್ತು. ಅಪೂರ್ವ ಪೂರ್ವಸ್ಮರಣದ ಕೊನೆಯ ಕಲಾಪವಾಗಿ ಹೊಸ್ತೋಟ ಮಂಜುನಾಥ ಭಾಗವತರ ಅಧ್ಯಕ್ಷೀಯ ಭಾಷಣ ನಡೆದಿತ್ತು.

ಮೊದಲ ರಂಗಕಲಾಪ – ಕೂಡಿಯಾಟ್ಟಂ, ಗೋಷ್ಠಿಯನ್ನು ಹಿಂಬಾಲಿಸಿದಂತೆ ಅದೇ ಒಳಾಂಗಣದಲ್ಲಿ ನಡೆಯಿತು. ಕೇರಳದಿಂದ ಬಂದಿದ್ದ ಕಲಾಮಂಡಲಂ ಸಂಗೀತ ಚಾಕ್ಯಾರ, ಯುಕ್ತ ಹಿಮ್ಮೇಳದೊಂದಿಗೆ ಏಕವ್ಯಕ್ತಿ ಪ್ರದರ್ಶನವನ್ನು (ಈ ಪ್ರಸಂಗದಲ್ಲಿ ಮೂರು –ರಾವಣ, ಶಿವ ಮತ್ತು ಪಾರ್ವತಿ ಪಾತ್ರಾಭಿ



ನಯ ಇತ್ತು) ಸಮರ್ಥವಾಗಿ ನಡೆಸಿಕೊಟ್ಟರು. ಪ್ರಸಂಗ 'ಕೈಲಾಸೋದ್ಧರಣಂ' (ರಾವಣ ಗರ್ವ ಭಂಗ); ಕೈಲಾಸ ಎತ್ತುವ ಸರಳ ಭಾಗ ಮಾತ್ರ. ಅದರ ಕಲಾಪ ವಿವರಗಳನ್ನು ಸಂಘಟಕರು ಮೊದಲೇ ಕನ್ನಡದಲ್ಲಿ ಹೇಳಿದ್ದುದರಿಂದ ನಾಟ್ಯಭಾಷೆಯ ಅಶಿಕ್ಷಿತರಿಗೂ ಆಂಗಿಕಗಳನ್ನು ಅರ್ಥೈಸಿಕೊಂಡು ಸಂತೋಷಿಸುವುದು ಸಾಧ್ಯವಾಯ್ತು.

ಕೂಡಿಯಾಟ್ಟಂನ ಹಿಮ್ಮೇಳದಲ್ಲಿ ಶ್ರುತಿವಾದ್ಯವಿಲ್ಲ, ಸನ್ನಿವೇಶಕ್ಕೆ ಪೂರಕವಾದ ಮಾಧುರ್ಯ ಗುಂಜಿಸುವ ಧ್ವನಿಗಳೇ ಇಲ್ಲ. ಇದರ ಗಾಯನ ಹಾಗೂ ಮಾತಿಲ್ಲದ ಕಲಾಪ ನನ್ನ ಯಕ್ಷ-ಪ್ರೇಕ್ಷಣೆಯ ಸಂಸ್ಕಾರಕ್ಕೆ ಕೂಡಿಯಾಟ್ಟಂನ ಬಹಳ ದೊಡ್ಡ ಕೊರತೆ ಯಾಗಿಯೇ ತೋರಿತು. ಇವರ ಮುಖ್ಯ ತಾಳವಾದ್ಯ – ಮಿಝುವು, ಪುಟ್ಟ ಕಡಾಯಕ್ಕೆ ಮುಚ್ಚಿಗೆ ಹಾಕಿದಂತಿರುವ ವಾದ್ಯ. ಪ್ರದರ್ಶನದ ಬಹುಭಾಗದಲ್ಲಿ ಜೋಡಿ ಮಿಝುವುಗಳ ಸದ್ದು, ನಾದರಹಿತ ಚಂಡೆಯಂತೆ ಅಥವಾ ಭರತನಾಟ್ಯ ಶಿಕ್ಷಣದಲ್ಲಿ ಗುರುಗಳು ಕುಟ್ಟುವ ಕೊರಡಿನಂತೆಯೇ ಕರ್ಣ ಕಠೋರವಾಗಿತ್ತು. ನಮ್ಮ ಚಂಡೆಯ ಜತೆಗಿನ ಮದ್ದಳೆಯಂತೆ, ಇಲ್ಲೊಂದು ಪುಟ್ಟ ಡೋಲು ಇದೆ. ಕೋಲಿನಲ್ಲಿ ನುಡಿಸುವ ಅದು ಪರಿಣಾಮದಲ್ಲಿ ಮದ್ದಳೆಯ ಸುಖದ ಹತ್ತಿರವೂ ಸುಳಿಯುವುದಿಲ್ಲ. ಮಿಝುವನ್ನು ಪೂರ್ಣಹಸ್ತದಲ್ಲಿ ಅಕ್ಷರಶಃ ಬಡಿಯುತ್ತಾರೆ. ಚಂಡೆ, ಮದ್ದಳೆ, ಮೃದಂಗಾದಿ ವಾದ್ಯಗಳಂತೆ ಬಿಡಿನುಡಿತಗಳ ಅಥವಾ ಬೆರಳುಗಳ ಚಮತ್ಕಾರ ಇದರ ವಾದನದಲ್ಲಿಲ್ಲ. ಕೇವಲ ಲಯವಿನ್ಯಾಸ ಹಾಗೂ ಧ್ವನಿಯ ಏರಿಳಿತದಲ್ಲಷ್ಟೇ ನಡೆಯುವ ಭಾವಪೋಷಣೆ ನನಗಂತೂ ರಸವೈವಿಧ್ಯಕ್ಕೆ ಕುತ್ತಾಗಿಯೇ ಕಾಣಿಸಿತು.

ಕೂಡಿಯಾಟ್ಟಂನ ವೇಷ ಕಥಕ್ಕಳಿಯದ್ದನ್ನು ಹೋಲುತ್ತದೆ. ಪಾತ್ರದ ಉಡುಗೆತೊಡುಗೆ ಮತ್ತು ಬಣ್ಣಗಾರಿಕೆಗಳಲ್ಲಿ ಮುಂಭಾಗದಿಂದ ಕಾಣುವ ವೈಭವ, ಬೆನ್ನು ಹಾಕಿದಾಗ ನೀರಸವಾಗುತ್ತದೆ– ಒಂದು ನಿಟ್ಟಿನಲ್ಲಿ ಹಾಸ್ಯಾಸ್ಪದವಾಗಿಯೇ ಕಾಣುತ್ತಿತ್ತು. ಇವೆಲ್ಲಕ್ಕೆ ಹೊರತಾಗಿ ನಿಂತದ್ದು – ಒಟ್ಟು ತಂಡದ ಶಿಸ್ತು, ನಿರ್ವಹಣಾ ಗಾಂಭೀರ್ಯ ಮತ್ತು ವೇಷಧಾರೀ ಕಲಾವಿದ. ಅತಿ ವಿಳಂಬ ಗತಿಯಲ್ಲಿ ಮತ್ತು ಬಹಳ ನವಿರಾಗಿ ಸಂಗೀತ ಚಾಕ್ಯಾರ್ ಕೊಟ್ಟ ಅಭಿನಯ ಅದ್ವಿತೀಯ. ಆದರೂ ಕೂಡಿಯಾಟ್ಟಂ ನೋಡುವ ಇನ್ನೊಂದು ಅವಕಾಶವನ್ನು ನಾನು ಬಯಸದಷ್ಟು ಶಕ್ತವಾಗಿದೆ ನಮ್ಮ (ತಿಟ್ಟುಗಳ ಬೇಧವಿಲ್ಲದೆ) ಯಕ್ಷಗಾನ ಎಂದು ಇಲ್ಲೇ ಹೇಳುವಲ್ಲಿ ನನಗೆ ಯಾವ ಸಂಕೋಚವೂ ಇಲ್ಲ.



ದಿನದ ಮೂರನೆಯ ಬೈಠಕ್ಕು – ನಾಟ್ಯೋತ್ಸವ ಸಂಮಾನ, ಐದು ಗಂಟೆಯ ಸುಮಾರಿಗೆ ಬಯಲು ರಂಗಮಂದಿರದಲ್ಲಿ ತೊಡಗಿತು. ಶತಮಾನಕ್ಕೂ ಮಿಕ್ಕ ಇತಿಹಾಸವಿರುವ ಬೆಳೆಯೂರಿನ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯನ್ನು ಸಾಂಸ್ಥಿಕ ಸಂಮಾನಕ್ಕೆ ಗುರುತಿಸಿದ್ದರು. ಉಳಿದಂತೆ ಸುಗಮ ಸಂಗೀತದಲ್ಲಿ ಹೆಸರಾಂತ ಹಿರಿಯ ಕಲಾವಿದ ರಾಘಣ್ಣ ಗರ್ತಿಕೆರೆ, ಸಂಗೀತ ಗುರುಗಳಾದ ಎಸ್.ಎಂ. ಭಟ್ಟ್ ಕಟ್ಟಿಗೆ, ಹಿರಿಯ ಹಿಂದೂಸ್ಥಾನೀ ಗಾಯನ ಪಟು ಜಿ.ಆರ್.ಭಟ್ ಬಾಳೆಗದ್ದೆ ಮತ್ತು ಉತ್ತಮ



ಸಂಘಟಕನ ನೆಲೆಯಲ್ಲಿ ಹಿರಿಯ ಪತ್ರಕರ್ತ ಜೀಯು ಭಟ್ಟ ಹೊನ್ನಾವರರೂ ಸಂಮಾನ ಪಂಚಕದಲ್ಲಿದ್ದರು. ನಾಟ್ಯೋತ್ಸವದ ಗಹನತೆಗೋ ಪ್ರಾದೇಶಿಕ ಅನಿವಾರ್ಯತೆಗೋ ಮುಖ್ಯ ಅತಿಥಿ ಗಳ ಪಟ್ಟಿಯಲ್ಲೂ ಏಳು ಮಂದಿಯಿದ್ದರು. ಅಧ್ಯಕ್ಷತೆಯನ್ನು ಮೈಸೂರಿನ ಜಿ.ಎಸ್.ಭಟ್ಟರು ವಹಿಸಿದ್ದರು. ದಿನದ ಕೊನೆಯ ಕಲಾಪ –ಸಾಂಸ್ಕೃತಿಕ ಪ್ರದರ್ಶನ, ಇದರಲ್ಲಿ ಎರಡು ಭಾಗಗಳಿದ್ದುವು. ಮೊದಲನೆಯದ್ದನ್ನು ಬೆಂಗಳೂರಿನ ಅನನ್ಯ ಸಂಸ್ಥೆಯ ರಾಘವೇಂದ್ರರು ಸಂಘಟಿಸಿ ಪ್ರಸ್ತುತಪಡಿಸಿದ್ದರು. ಅನುರಾಧಾ ವಿಕ್ರಾಂತ, ಶಮಾಕೃಷ್ಣ ಮತ್ತು ದಿವ್ಯಾರವಿಯವರ ಭರತನಾಟ್ಯ, ಕೂಚಿಪುಡಿಗಳ ನಾಲ್ಕೆಂಟು ಸಂಯೋಜನೆಗಳು. ಧ್ವನಿಮುದ್ರಿತ ಹಿಮ್ಮೇಳದೊಂದಿಗೆ ಮೂಡಿದ ಈ ಕಲಾಪಗಳು ಗುಣವಂತೆಯಂಥ ಹಳ್ಳಿಮೂಲೆಯ ಪ್ರೇಕ್ಷಕರನ್ನು ತಣಿಸಿದ್ದಿರಬಹುದು. ಆದರೆ ವಠಾರಕ್ಕೊಂದು ನಾಟ್ಯಶಾಲೆ, ವರ್ಷಕ್ಕೆಂಟು ಹುಚ್ಚುಚ್ಚು ರಂಗಪ್ರವೇಶಗಳು, ನೂರೆಂಟು ಅನ್ಯ ನೆಪದ ಪ್ರಯೋಗ–ಪ್ರದರ್ಶನ ಹಾಗೂ ಸಂಯೋಜನಾ ಕೂಟಗಳಿಂದ ದೂರ ಉಳಿದರೂ ಆಮಂತ್ರಣ, ಪತ್ರಿಕಾ ವರದಿಗಳ ಮೂಲಕ ಅನುಭವಿಸುತ್ತಲೇ ಬಂದ ಮಂಗಳೂರಿಗನಾದ ನನಗೆ ವಿಶೇಷವಾಗಲಿಲ್ಲ.

ತೆಲುಗು ವಲಯದಿಂದ ಯಾವುದೋ ಐತಿಹಾಸಿಕ ಕಾರಣಕ್ಕೆ, ಎಂದೋ ತಮಿಳುನಾಡಿನ ಮೇಲಟ್ಟೂರಿಗೆ ವಲಸೆಗೊಂಡರೂ ಮೂಲ ಭಾಷೆಯೊಡನೆ ಸಾಂಪ್ರದಾಯಿಕ ಆರಾಧನಾ ಕಲೆಯನ್ನು ಉಳಿಸಿಕೊಂಡು ಬಂದದ್ದು ಭಾಗವತರ ಮೇಳ. ನಾಲ್ಕೈದು ಹಾಡುಗಾರರು, ಹಲವು ವಾದ್ಯ ವೈವಿಧ್ಯಗಳೊಂದಿಗೆ ಸಜ್ಜಾದ ಹಿಮ್ಮೇಳ, ಭರ್ಜರಿ ನಾಟಕೀಯ ವೇಷಭೂಷಣ ಹಾಗೂ ಪಾತ್ರಗಳೊಂದಿಗೆ ರಂಗ ತುಂಬುವ ಮುಮ್ಮೇಳ. ಇದೂ ನಮ್ಮ ಯಕ್ಷಗಾನದಂತೇ ಇಡಿಯ ರಾತ್ರಿಯನ್ನಾವರಿಸುವ ಕಲೆಯಂತೆ. ಆದರೆ ಪ್ರಸ್ತುತ ನಾಟ್ಯೋತ್ಸವದ ಅನುಕೂಲಕ್ಕಾಗಿ ಸುಮಾರು ನಾಲ್ಕು ಗಂಟೆಗಳ ಸಮಯಮಿತಿ ಯನ್ನಳವಡಿಸಿಕೊಂಡು 'ಶ್ರೀ ಕೃಷ್ಣ ಜನನಂ, ಕಂಸ ವಧ' ಪ್ರಸಂಗದ ಪ್ರದರ್ಶನ ಕೊಟ್ಟರು. ಸಂಗೀತದ ಅಂಶ ಬಹುತೇಕ ಶುದ್ಧ ಕರ್ನಾಟಕ ಶಾಸ್ತ್ರೀಯ ಸಂಪ್ರದಾಯಕ್ಕೆ ಶರಣಾದಂತಿದೆ. ಕೇಳಲು ಹಿತಕರವಾಗಿತ್ತು. ಝಗಮಗಿಸುವ ವೇಷಭೂಷಣಗಳಲ್ಲೇನೂ ಸಾಂಪ್ರದಾಯಿಕತೆ ಉಳಿದಂತಿಲ್ಲ. ಸಾತತ್ಯ ವಿಲ್ಲದ ಬಿರುಸಿನ ಕುಣಿತ ಹಾಗೂ ಕಥಾ ಸಂವಹನಕ್ಕಷ್ಟೇ ಮಿತಗೊಂಡ ಮಾತುಗಳು ವಿಶೇಷ ಕಲಾನುಭೂತಿಯನ್ನೇನೂ ಕೊಡುವಂತಿರಲಿಲ್ಲ. ಕೃಷ್ಣ ಜನನದವರೆಗೆ ಕುಳಿತೆವಾದರೂ ಕಥನ ಕುತೂಹಲವೇನೂ ಉಳಿಯಲಿಲ್ಲ.

ದಿವಂಗತ ಕೆರೆಮನೆ ಶಂಭು ಹೆಗಡೆಯವರೇ ಜೀವಿತಾವಧಿಯಲ್ಲಿ ಕಟ್ಟಿ ನಡೆಸಿದ್ದು – ಶ್ರೀಮಯ (ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ) ರಂಗ ಶಿಕ್ಷಣ ಕೇಂದ್ರ ಮತ್ತು ಕೆರೆಮನೆ ಶಿವರಾಮ ಹೆಗಡೆ ರಂಗಮಂದಿರ. ಅವಕ್ಕೆ ಸಮರ್ಥ ಉತ್ತರಾಧಿಕಾರಿಯಾಗಿಯೇ ಒದಗಿದ ಅವರ ಮಗ ಕೆರೆಮನೆ ಶಿವಾನಂದ ಹೆಗಡೆ, ಇಂದು ಶಂಭು ಹೆಗಡೆ ಬಯಲುರಂಗಮಂದಿರ ಹಾಗೂ ಯಕ್ಷ ವಿಗ್ರಹರಚನೆಯ ವೈವಿಧ್ಯಗಳನ್ನು ಸೇರಿಸಿದ್ದಾರೆ. ವಾರ್ಷಿಕ ನಾಟ್ಯೋತ್ಸವವನ್ನಂತೂ ಇದೀಗ ಆರನೇ ಸಲ ರಾಷ್ಟ್ರೀಯ ಮಟ್ಟದ ವೈಭವದಲ್ಲಿ ನಡೆಸುತ್ತಿದ್ದಾರೆ. ಉತ್ಸವದ ಅಂಗವಾಗಿ ಸಭಾಭವನದ ಜಗುಲಿಯಲ್ಲಿ ಚಿತ್ರ ಪ್ರದರ್ಶನ ಏರ್ಪಡಿಸಿದ್ದರು. ಗಣ್ಯ ಪ್ರೇಕ್ಷಕರನ್ನೂ ಒಳಗೊಂಡಂತೆ ಎಲ್ಲ ಭಾಗಿಗಳಿಗೆ ಕಾಲಕಾಲಕ್ಕೆ ಹಿತವಾದ ಪಾನೀಯ, ತಿನಿಸುಗಳನ್ನು ಆತ್ಮೀಯವಾಗಿಯೇ ಒದಗಿಸಿದ್ದು ನಮಗಂತೂ ಅಪ್ಯಾಯಮಾನವಾಗಿತ್ತು. ಇಡಗುಂಜಿ ಮೇಳದ ಎಂಟನೇ ದಶಕದ ನಡೆ, ಮೂರನೇ ತಲೆಮಾರಿನ ಆಡಳಿತ (ನಾಲ್ಕನೆಯದಕ್ಕೂ ಮುಂದುವರಿಯುವ ಸೂಚನೆ–ಸಕ್ರಿಯರಾಗಿದ್ದ ಶಿವಾನಂದರ ಎರಡೂ ಮಕ್ಕಳಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು) ಇನ್ನಷ್ಟು ಯಶಸ್ಸನ್ನು ಕಾಣಲಿ ಎಂದು ನಾವು ಮನಸಾರೆ ಹಾರೈಸುತ್ತೇವೆ.

– ***ಜಿ.ಎನ್.ಅಶೋಕ ವರ್ಧನ್, ಮಂಗಳೂರು***

## ಸಂಪಾದಕರ ಡೈರಿಯಿಂದ


* ಪುತ್ತೂರಿನ ಅತಿಹಿರಿಯ ಕಲಾಸಂಘವಾದ ಆಂಜನೇಯ ಯಕ್ಷಗಾನ ಕಲಾಸಂಘದ ಭಾಗವಾದ ಮಹಿಳಾ ತಾಳಮದ್ದಳೆ ಕೂಟಗಳ ದಶಮಾನೋತ್ಸವ ಕಾರ್ಯಕ್ರಮವು ಹತ್ತು ದಿನಗಳ ಕಾಲ ಮನೆಯಂಗಣದ ತಾಳಮದ್ದಳೆಯ ಆಯೋಜನೆಯಲ್ಲಿ ಜರುಗಿ; ಸಮಾರೋಪವು ಡಿಸೆಂಬರ್ 25ರಂದು ಪುತ್ತೂರಿನ ನಟರಾಜ ವೇದಿಕೆಯಲ್ಲಿ ನೆರವೇರಿತು. ಚಿಂತನಪೂರ್ಣವಾದ ಉಪನ್ಯಾಸದ ಗೋಷ್ಠಿಯಲ್ಲಿ ಮನೋರಮಾ ಬಿ.ಎನ್ 'ರಸ ಮತ್ತು ನವರಸ ಪ್ರತಿಪಾದನೆ'ಯ ಕುರಿತು ಸುಮಂಗಲಾ ರತ್ನಾಕರ್ 'ಯಕ್ಷಗಾನದ ಆಂಗಿಕ ಮತ್ತು ಸಾತ್ತ್ವಿಕಾಭಿನಯ'ದ ಕುರಿತು ಮಾತನಾಡಿದರು. ಹಿರಿಯ ಅರ್ಥಧಾರಿಗಳ ಕೂಡುವಿಕೆಯಲ್ಲಿ ಶ್ರೀಕೃಷ್ಣ ಪಾರಿಜಾತ ಕಥಾವಸ್ತುವಿನ ತಾಳಮದ್ದಳೆ ಕೇಳುಗರಿಗೆ ಪ್ರಿಯವಾಯಿತಾದರೂ ನಂತರ ಜರುಗಿದ ಅಡ್ಡನಡ್ಕದ ಮಹಿಳಾಕೂಟದ ಯಕ್ಷಗಾನ ಪ್ರದರ್ಶನ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಎಲ್ಲ ರೀತಿಯಿಂದಲೂ ಸೋತಿತು.

* ಪುತ್ತೂರಿನ ನಟರಾಜವೇದಿಕೆಯಲ್ಲಿ ಕರ್ನಾಟಕ ಸಾಂಸ್ಕೃತಿಕ ಕಲಾವೇದಿಕೆ ಮತ್ತು ಅನ್ಯಾನ್ಯ ಪ್ರಾಯೋಜಕತ್ವದ ಆಶ್ರಯದಲ್ಲಿ ನಡೆದ 'ಹತ್ತನೇ ಕರ್ನಾಟಕ ಯಕ್ಷಗಾನ ಬಯಲಾಟ ಸಮ್ಮೇಳನ'ವು ಯಕ್ಷಗಾನ ತಾಳಮದ್ದಳೆ ವಿದ್ವಾಂಸ, ಕಲಾವಿದ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿಗಳ ಘನ ಅಧ್ಯಕ್ಷತೆಯಲ್ಲಿ 2015, ಜನವರಿ 2–5ರವರೆಗೆ ಯಶಸ್ವಿಯಾಗಿ ಜರುಗಿತು. ಸಮ್ಮೇಳನದ ಅಂಗವಾಗಿ ಜರುಗಿದ ಉಪನ್ಯಾಸಗಳು ಚಿಂತನಶೀಲವಾಗಿದ್ದವಾದರೂ ಭಾಷಣ–ಉಪನ್ಯಾಸಗಳ ಅವಧಿಯು ಹೆಚ್ಚು ಸಮಯ ಲಂಬಿಸಿದ ಹಿನ್ನಲೆಯಲ್ಲಿ ಕೇಳುಗರ ತಾಳ್ಮೆಯನ್ನೂ ಪರೀಕ್ಷಿಸಿದ್ದು ಸತ್ಯ. ತೆಂಕು, ಕೃಷ್ಣ ಪಾರಿಜಾತ–ಘಟ್ಟದಕೋರೆ ಇತ್ಯಾದಿ ಮೂಡ–ಪಡುವ ಯಕ್ಷಗಾನ ಬಯಲಾಟದ ಪ್ರಯೋಗ ಆಯ್ಕೆ ಮತ್ತು ಪ್ರದರ್ಶನಗಳಲ್ಲಿ ಇನ್ನಷ್ಟು ಗುಣಮಟ್ಟ ಅಪೇಕ್ಷಣೀಯ. ಆದರೆ ಯಕ್ಷಗಾನ ಕಲಾವಿದರೇ ಅಗತ್ಯ ವಾಗಿ ಭಾಗವಹಿಸಬೇಕಾದಂತಹ ಇಂತಹ ಸಮ್ಮೇಳನದಲ್ಲಿ ಅವರ ಹಾಜರಾತಿಯ ದೊಡ್ಡ ಕೊರತೆಯೇ ಪ್ರಮುಖವಾಗಿ ಕಂಡಿತು. ಮುಂಬರುವ ಸಮ್ಮೇಳನಗಳಲ್ಲಿ ಸಮ್ಮೇಳನದ ಸ್ವರೂಪವನ್ನು ನಿರ್ಧರಿಸುವ ವೇದಿಕೆಯ ಅಚ್ಚುಕಟ್ಟು ಸೌಂದರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಯೋಜಿಸುವುದ ರೊಂದಿಗೆ, ಸಮ್ಮೇಳನದ ನೇರ ಫಲಾನುಭವಿಗಳಾಗಬಲ್ಲ ಕಲಾವಿದರನ್ನು ಒಗ್ಗೂಡಿಸುವುದೂ ಒಳಿತು.

* ಬೆಂಗಳೂರಿನ ದೃಷ್ಟಿ ಸಂಸ್ಥೆಯ ದಶಮಾನೋತ್ಸವದ ಪ್ರಯುಕ್ತ (ಜನವರಿ 10, 2015) ಆಯೋಜಿ ಸಲಾಗಿದ್ದ ಸನ್ಮಾನವನ್ನು ಸ್ವೀಕರಿಸಿದ ಹೆಸರಾಂತ ಕಲಾವಿದೆ ಡಾ.ಪದ್ಮಾ ಸುಬ್ರಹ್ಮಣ್ಯಂ ನೃತ್ಯಪ್ರಸ್ತುತಿಗಳನ್ನು ಪ್ರೇಕ್ಷಕರಲ್ಲಿ ರಸೋಜ್ವಲವಾಗಿ ತೆರೆದಿಟ್ಟರು. ದೇವಿಕೃತಿ, ರಾಮನ ಕುರಿತ ನವವಿಧಭಕ್ತಿ ಮತ್ತು ಬ್ರಹ್ಮ ಒಕಟೇ ಎಂಬ ಕೃತಿಗಳು ಸಾತ್ತ್ವಿಕ ಅಭಿನಯಕ್ಕೆ ಸೋದಾಹರಣ ಸಾಕ್ಷಿಯಾದವಲ್ಲದೆ; ಒಂದೇ ವಾಕ್ಯದ ಪುನರಾವರ್ತಿತ ಸಾಹಿತ್ಯಕ್ಕೂ ನೀಡಿದ ಅಭಿನಯದ ವೈವಿಧ್ಯತೆಯಲ್ಲಿರುವ ಸಾಂದ್ರತೆಯು ಮತ್ತೊಮ್ಮೆ ಪದ್ಮಾ ಅವರ ಅಸಾಧಾರಣ ಸತ್ತ್ವವನ್ನು ಪರಿಚಯ ಮಾಡಿಸಿದವು. ಅವರ ಮೊಮ್ಮಗಳು ಮಹತಿ ಕಣ್ಣನ್ ಅವರ ನೃತ್ತ ಮತ್ತು ಅಭಿನಯವೂ ಹೆಚ್ಚಿನ ಆಯಾಸ–ಸಾಹಸಗಳಿಲ್ಲದೆ ಹೇಗೆ ನೃತ್ಯವನ್ನು ಸಲಿಲಸುಂದರವನ್ನಾಗಿಸಬಹುದು ಎಂಬುದಕ್ಕೆ ಸಾಕ್ಷಿಯಾಯಿತು. ಜೊತೆಗೆ ಡಾ.ಪದ್ಮಾ ಅವರ ನೃತ್ಯಪರಂಪರೆಗೆ ಸಮರ್ಥ ಉತ್ತರಾಧಿಕಾರಿಯಾಗಬಲ್ಲ ಸೂಚನೆ ಮಹತಿ ಅವರ ನರ್ತನ ದಲ್ಲಿಯೂ ಕಂಡುಬಂತು. ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಪ್ರಾರಂಭಕ್ಕೆ ಸಂಸ್ಥೆಯ ನಿರ್ದೇಶಕಿ ಅನುರಾಧಾ ವಿಕ್ರಾಂತ್ ಅವರು ತ್ಯಾಗರಾಜರ **'ಸಾಧಿಂಚನೇ'** ಕೃತಿಯನ್ನು ಮತ್ತು ಅವರ ವಿದ್ಯಾರ್ಥಿ ಗಳು ಮಲ್ಲರಿಯನ್ನು ನೃತ್ಯದಲ್ಲಿ ಪ್ರಸ್ತುತಪಡಿಸಿದರಾದರೂ ಸತ್ತ್ವದ ಹೂರಣ ಒದಗಬೇಕಿತ್ತೆನಿಸಿತು.

* ಬೆಂಗಳೂರಿನ ಅನನ್ಯ ನೃತ್ಯಸಂಸ್ಥೆ ಮತ್ತು ವಿಆರ್‌ಸಿ ಅಕಾಡೆಮಿ ಅವರ ಸಹಯೋಗದಲ್ಲಿ ವಾರ್ಷಿಕ ಎಡಿಎ ರಂಗಮಂದಿರದಲ್ಲಿ ದಿನಾಂಕ 11–13ರವರೆಗೆ ನಡೆಯಿತು. ಕುಮಾರಿ ಅನನ್ಯ ಅವರ ಭರತನಾಟ್ಯ ಕಾರ್ಯಕ್ರಮದಲ್ಲಿ ಷಣ್ಮುಖನ ಕುರಿತ ತಮಿಳು ವರ್ಣವನ್ನು ಪ್ರತಿಭಾಪೂರ್ಣವಾಗಿ

ಪ್ರಸ್ತುತಪಡಿಸಿ, ಕ್ಲಿಷ್ಟವಾದ ಗತಿ–ಲಯಗಳನ್ನು ಜತಿಯಲ್ಲಿ ಸಂಭಾಳಿಸಿ, ಅಂಗಶುದ್ಧಿ–ದೇಹಶ್ರಮದ ಸಂಕೀರ್ಣತೆಗಳಲ್ಲಿ ಆಂಗಿಕಾಭಿನಯದಲ್ಲೇ ಅಭಿನಯನೈಪುಣ್ಯತೆ ತೋರಿ ಚಪ್ಪಾಳೆ ಗಿಟ್ಟಿಸಿಕೊಂಡರು. ಆದರೆ ಗುರು ಶಂಕರ್ ಕಂದಸ್ವಾಮಿಯವರ ಆಂಗಿಕದ ಬಿರುಸಿನ ಅನುಕರಣೆ ಅನನ್ಯ ಅವರ ಎಳೆಯ ದೇಹಕ್ಕೆ ಅಷ್ಟಾಗಿ ಒಪ್ಪದೆ ರಮ್ಯತೆಗಿಂತ ಕಣ್ಣುಗಳಿಗೆ ತ್ರಾಸವನ್ನೇ ಒದಗಿಸಿತು. ಆದರೆ ನಂತರದಲ್ಲಿ ಡಾ.ಶ್ರೀಧರ್ ಮತ್ತು ಅನುರಾಧಾ ಶ್ರೀಧರ್ ಅವರ ಸಂಯೋಜನೆಯಲ್ಲಿ ಈಗಾಗಲೇ ಪ್ರಸಿದ್ಧಿ ಪಡೆದ ತಮಿಳು ಕಥೆಗಳನ್ನಾಧರಿಸಿದ 'ಪರಿವರ್ತನ' ಎಂಬ ರೂಪಕವು ಹೊಸ ಮಾದರಿಯ ಅಭಿವ್ಯಕ್ತಿ ಪರಿಕ್ರಮದ ಅರಿವು ಮೂಡಿಸಿತು. ವ್ಯಕ್ತಿಯ ಜೀವನದಲ್ಲಿ ಮಾನುಷಿಕವಾಗಿ ಮತ್ತು ದೈವಿಕವಾಗಿ ಒದಗಿ ಬರುವ ಗುಣಾತ್ಮಕ ಪಲ್ಲಟದ ರೂಪಗಳನ್ನು ನಿರೂಪಿಸಿ ಸಂಯೋಜಿಸಲಾದ ರೂಪಕದಲ್ಲಿ ಮೊದಲ ರೂಪಕ ತನ್ನ ಲೋಕಧರ್ಮಿ ಮತ್ತು ಸಾತ್ತ್ವಿಕ ಅಭಿನಯದಿಂದ ಪರಿಣಾಮಕಾರಿಯಾದ ಸಂವಹನವನ್ನೇ ಇತ್ತಿತು. ಅದರಲ್ಲೂ ಸಾಹಿತ್ಯದ ನೆರವನ್ನು ಪಡೆಯದೆ ಕೇವಲ ಸಂಗೀತ ಮತ್ತು ವಾದ್ಯಗಳ ನೆರವಿನಲ್ಲಿ ಪ್ರಾಯೋಗಿಕವಾಗಿ ರೂಪಿಸಲಾದ ಮೊದಲನೆಯ ರೂಪಕಭಾಗವೇ ಹೆಚ್ಚು ಪ್ರೇಕ್ಷಕರಮಣೀಯವಾಗಿದ್ದಕ್ಕೆ ಅಭಿನಂದನೆಗಳು. ಶ್ರೀಧರ್ ದಂಪತಿಗಳ ಸಾತ್ತ್ವಿಕಾಭಿನಯ ದೃಷ್ಟಿ ಅವರ ಆಂಗಿಕವನ್ನೂ ಮೀರಿ ಮನೋಜ್ಞವಾಗಿ ಬೆಳೆದಿರುವುದೇ ಅವರ ವೈಶಿಷ್ಟ್ಯ.



ಅನನ್ಯ

* ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ಪ್ರಭಾತ್ ಕಲಾವಿದರ ಕುಟುಂಬದ ಹೇಮಾ ಪಂಚಮುಖಿ ಸಂಘಟಿಸಿದ್ದ ವಾರ್ಷಿಕ ಕಾರ್ಯಕ್ರಮದಲ್ಲಿ ಡಾ.ಶೋಭಾ ಶಶಿಕುಮಾರ್ ಅವರು 'ನಾಯಕಾ–ನಾಯಿಕಾಭಿವ್ಯಕ್ತಿ : ಕಾವ್ಯದಿಂದ ನೃತ್ಯ ಹಾದಿಗೆ' ಎಂಬ ವಿಚಾರವಾಗಿ ಪ್ರಬುದ್ಧ ವಿಶ್ಲೇಷಣೆಯ ಉಪನ್ಯಾಸ ಪ್ರಾತ್ಯಕ್ಷಿಕೆಯನ್ನು ಒಂದುಗಂಟೆಗಳ ಕಾಲ ನಡೆಸಿಕೊಟ್ಟರು.
* ಕೆರೆಮನೆ ರಾಷ್ಟ್ರೀಯ ನಾಟ್ಯೋತ್ಸವದ ಮೂರನೇ ದಿನದ ಪೂರ್ವಾಹ್ನದಲ್ಲಿ (8 ಫೆಬ್ರವರಿ, 2015) ಮೇಲತ್ತೂರು ಭಾಗವತ ಮೇಳ (ಮೇಲತ್ತೂರಿನ ವಿದ್ವಾನ್ ನಟರಾಜ ಶರ್ಮ) ಕೂಚಿಪುಡಿ ಯಕ್ಷಗಾನ (ಆಂಧ್ರದ ತಾಡೆಪಲ್ಲಿ ಸತ್ಯನಾರಾಯಣ ಶರ್ಮ ಮತ್ತು ಬಳಗ) ಕರ್ನಾಟಕ ಯಕ್ಷಗಾನ (ಮಂಗಳೂರಿನ ಡಾ.ಪ್ರಭಾಕರ ಜೋಷಿ) ಅವರ ವಿದ್ವತ್ಪೂರ್ಣ ಉಪನ್ಯಾಸದ ಚಿಂತನ ಆಯಾಯ ಕಲೆಯ ಆಳ–ಅಗಲಗಳನ್ನು ಅರ್ಥೈಸಿಕೊಳ್ಳಲು ನೆರವಾದವು.
* ಪುತ್ತೂರಿನ ಎಸ್‌ಡಿಪಿ ಆಯುರ್ವೇದ ಸಂಸ್ಥೆಯವರ ಮೂರುದಿನಗಳ ಗೀತ–ನೃತ್ಯ–ಯಕ್ಷಗಾನದ ವಾರ್ಷಿಕ ಕಲೋಪಾಸನ ಕಾರ್ಯ ಕ್ರಮವು (ಫೆಬ್ರವರಿ 15–17) ಕಲಾಭಿಮಾನಿಗಳ ಹೆಚ್ಚಿನ ನೆರೆಯುವಿಕೆಯಲ್ಲಿ ವಿಜೃಂಭಿಸಿತು. ಮೊದಲನೆಯ ದಿನದ ಟಿ.ಎಂ.ಕೃಷ್ಣನ್ ಅವರ ಕಛೇರಿ ವಿದ್ವತ್ಪೂರ್ಣವಾದದ್ದೇ ಆದರೂ ರಸನಿರ್ಮಾಣದಲ್ಲಿ ಪ್ರೇಕ್ಷಕರನ್ನು ಹೆಚ್ಚಿನ ಆಸ್ವಾದನೆಯಲ್ಲಿ ಮುಳುಗಿಸಲಿಲ್ಲ. ಆದರೆ ಎರಡನೆಯ ದಿನದ ಶ್ರೀಧರ್ ಮತ್ತು ಅನುರಾಧಾ ಶ್ರೀಧರ್ ದಂಪತಿಗಳ 'ಮಹಾಭಾರತ' ನೃತ್ಯ ರೂಪಕವು ಜನಾದರವನ್ನು, ರಸೌಚಿತ್ಯ





ವನ್ನು ಸಾಧಿಸಿತು. ಶತಾವಧಾನಿ ಡಾ.ಆರ್. ಗಣೇಶರ ಸಾಹಿತ್ಯದಲ್ಲಿ, ಡಾ.ನಾಗವಲ್ಲಿ ನಾಗರಾಜ್ ಮತ್ತು ತಿರುಮಲೆ ಶ್ರೀನಿವಾಸರಾವ್ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದ ರೂಪಕಕ್ಕೆ ವಿದ್ವಾನ್ ಬಾಲಸುಬ್ರಹ್ಮಣ್ಯ ಶರ್ಮ ಅವರ ಗಾಯನ ಮತ್ತು ನಟುವಕಾರ ಪ್ರಸನ್ನಕುಮಾರ್ ಅವರ ಜತಿನಿರೂಪಣೆಯನ್ನು ಮಾಡಿದ್ದರು. ಕರ್ಣಾನಂದಕರವಾದ ಸಂಗೀತ ಧ್ವನಿಮುದ್ರಿತ ಸಿಡಿಯಲ್ಲೇ ಸುಮಾರು 1 ಗಂಟೆಗಳ ಕಾಲ ಪ್ರಸ್ತುತಿಗೊಂಡಿತ್ತು. ಮಹಾಭಾರತದಂತಹ ದೀರ್ಘಕತೆಯನ್ನು ಅದರ ಅಧ್ಯಾಯಗಳಿಗನುಗುಣವಾಗಿ ಆರಿಸಿ, ಭಿನ್ನ ಭಿನ್ನ ಭಾವಗಳನ್ನು ಸಂಲಗ್ನಗೊಳಿಸಿ ಸಂಯೋಜಿಸಿರುವ ಶ್ರೀಧರ್ ದಂಪತಿಗಳು ಕಥನ ಕುತೂಹಲದಲ್ಲಿ ಎಳ್ಳಷ್ಟೂ ರಾಜಿ ಮಾಡಿಕೊಳ್ಳದೆ ಉತ್ತಮ ಬೆಳಕಿನ ನಿರ್ವಹಣೆಯೊಂದಿಗೆ ಮಹಾಭಾರತದ ಸಮಗ್ರತೆಯನ್ನು ಕಟ್ಟಿಕೊಟ್ಟಿದ್ದರು. ದಶಕಗಳ ಹಿಂದಿನಿಂದಲೂ ನಡೆದ ಅವರ ಈ ಕಥಾನೃತ್ಯದ ಯಾತ್ರೆ ಇಂದಿಗೂ ಅದೇ ಓಘ–ಮಾಧುರ್ಯವನ್ನು ಉಳಿಸಿಕೊಂಡೂ ಬಂದಿದೆ. ಇದಕ್ಕಿಂತಲೂ ಮುಂಚೆ ಪುಷ್ಪಾಂಜಲಿ, ಅಲರಿಪ್ಪು ಮತ್ತು ಕೃತಿಗಳನ್ನು ಪ್ರಸ್ತುತಪಡಿಸಿದ ಶ್ರೀಧರ ದಂಪತಿಗಳ ಪುತ್ರಿ ಅನಘಾಗೌರಿಯಲ್ಲಿ ಭರತನಾಟ್ಯ ಆಂಗಿಕಾಭಿನಯದ ರೇಖೆ–ಕೋನಗಳ ಸಂಪ್ರದಾಯವು ಸಿದ್ಧಿಸಿದ್ದನ್ನು ಗಮನಿಸಬಹುದು.

* ಉಪ್ಪಿನಂಗಡಿಯ ಸಹಸ್ರಲಿಂಗೇಶ್ವರ ದೇವಾಲಯದ ಅಷ್ಟಬಂಧ ಬ್ರಹ್ಮಕಲಶೋತ್ಸವ ಪ್ರಯುಕ್ತ ಜರುಗಿದ (20ಫೆಬ್ರವರಿಯಿಂದ 25 ಫೆಬ್ರವರಿ 2015) ಸಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಂಬೈನ ಕಲಾವಿದರಿಂದ ಜರುಗಿದ ರಾಜಾಸ್ಥಾನಿ ನೃತ್ಯವು ನೀರಸವಾಗಿತ್ತು. ವೇಷಭೂಷಣಗಳನ್ನು ಹೊರತುಪಡಿಸಿದರೆ ಇನ್ನಾವುದೇ ಅಂಶಗಳಲ್ಲಿಯೂ ರಾಜಸ್ಥಾನಿ ನೃತ್ಯವೈಭವದ ಸೊಬಗು ಇರಲೇ ಇಲ್ಲ. ಆದರೆ ಮೂರನೇ ದಿನ ಜರುಗಿದ ಪ್ರಭಾತ್ ಕಲಾವಿದರ ನೃತ್ಯನಾಟಕಗಳು ತಮ್ಮ ಪ್ರಬುದ್ಧವಾದ ದಶಕಗಳ ಹಿಂದಿನ ವೈಭವದ ನಾಟ್ಯಪ್ರಜ್ಞೆಗೆ ಸಾಕ್ಷಿಯಾದವು. ಮಹಿಷಮರ್ದಿನಿ ಮತ್ತು ಧರ್ಮಭೂಮಿಯೆಂಬ ಎರಡು ನೃತ್ಯನಾಟಕಗಳಲ್ಲಿಯೂ ಪ್ರಭಾತ್ ಕಲಾವಿದರ ತಂಡದ ಹಿರಿಯ ತಲೆಮಾರಿನ ನಿರ್ದೇಶನ, ಕಥಾಭಿತ್ತಿ, ಚಿತ್ರಕಥೆಯಲ್ಲಿ ಪರಂಪರೆಯನ್ನು ಹೊಂದಿಸುವ ಜಾಣ್ಮೆ, ಅಭಿನಯಸಾಂದ್ರತೆ, ಕಲಾವಿದರ ಮಗ್ನತೆ, ಆಹಾರ್ಯಾಭಿನಯ, ವಾಚಿಕಾಭಿನಯದ ಸ್ಪಷ್ಟತೆ, ರಾಗಾನುಭವದಲ್ಲೇ ರಸಾವಹವಾಗುವ ಸಂಗೀತ ಶ್ರಮ ಮತ್ತು ಭಾವನಿರೂಪಣೆಗಳೂ ಸುವ್ಯಕ್ತವಾದವು. ಸಿನೆಮಾದಂತಹ ಬಹುಮುಖೀ ಆಯಾಮದ ಕಲೆಗೆ ಇರುವ ಆಸ್ವಾದನೆಗೆ ಸಮಸ್ಪಂದಿಯಾಗಿ ನೃತ್ಯದಲ್ಲಿಯೂ ಅಂತಹುದೇ ವಾತಾವರಣವನ್ನು ಕಟ್ಟಿಕೊಡುವ ಸಾಮರ್ಥ್ಯ ಪ್ರಭಾತ್ ಕಲಾವಿದರಲ್ಲಿ ಹಲವು ವರ್ಷಗಳಿಂದಲೂ ತೋರಿಕೊಂಡು ಬಂದಿದೆ. ಪರಂಪರೆಯ ಪ್ರತಿಭೆ ಕಾಲಾನುಕಾಲಕ್ಕೆ ಮಸುಳಿಸಿದರೂ ಪ್ರೇಕ್ಷಕರ ಮನಗೆಲ್ಲುವಲ್ಲಿ ಯಸಸ್ವಿಯಾಯಿತು.

ಎರಡನೇ ದಿನ ಎಲ್.ಸುಬ್ರಹ್ಮಣ್ಯಂ ಮತ್ತು ಅಂಬಿ ಸುಬ್ರಹ್ಮಣ್ಯಂ ಅವರ ಕಛೇರಿ ಮತ್ತು ಕವಿತಾ ಕೃಷ್ಣಮೂರ್ತಿ ಅವರ ಗಾಯನದ ಕಾರ್ಯಕ್ರಮ ಸೊಗಸಾಗಿದ್ದರೂ; ಕಛೇರಿಯಲ್ಲಿ ಒಂದೇ ಕೃತಿಯಷ್ಟೇ ಅನಾವರಣಗೊಂಡಿದ್ದು ಕೊಂಚ ಬೇಸರ ತರಿಸಿತು. ಆದಾಗ್ಯೂ ಹಂಸಧ್ವನಿ ರಾಗದ 'ವಾತಾಪಿ ಗಣಪತಿಂ ಭಜೇ'ಗೆ ಅಪ್ಪ–ಮಗನ ನಿರ್ವಹಣೆ ಪ್ರಬುದ್ಧ, ಅಚ್ಚರಿಯ ಅನುಭೂತಿಯನ್ನಷ್ಟೇ ಅಲ್ಲ,; ಒಂದೇ ಕೃತಿಯಲ್ಲಿಯೇ ಕಲೆಯ ಅನ್ಯಾದೃಶ್ಯ ಮಾಧುರ್ಯವನ್ನು ಸಾಕ್ಷಾತ್ಕರಿಸಲು ಸಾಧ್ಯ ಎಂಬುದನ್ನು ನಿರೂಪಿಸಿದ್ದರು. ಆದರೆ ಕೊನೆಯ ದಿನ ಆಯೋಜಿಸಲಾಗಿದ್ದ ಶ್ರೀಶ್ರೀ ಶ್ರೀ ರಾಘವೇಶ್ವರ ಸ್ವಾಮೀಜಿಗಳ ವಿಶಿಷ್ಟ ಕಾರ್ಯಕ್ರಮ– ಗಾಯನ–ಪೂಜನ–ನರ್ತನ–ಕೀರ್ತನ– ರೂಪಕಗಳ ಹಿನ್ನೆಲೆಯ 'ಶಿವಕಥೆ'ಯು

ಸರ್ಕಾರದ ರಾಜಕೀಯಕ್ರಮಗಳ ಫಲವಾಗಿ ರದ್ದಾಗಿದ್ದರಿಂದ ಸಾರ್ವಜನಿಕರಲ್ಲಿ ಅಪಾರ ಆಕ್ರೋಶ, ಬೇಸರ ವ್ಯಕ್ತವಾಯಿತು. ಜನಾದೇಶ ಹೊಂದಿದ ಉತ್ತಮ ಗುಣಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸರ್ಕಾರದ ತಡೆ ಮತ್ತು ಹಸ್ತಕ್ಷೇಪವು ಉತ್ತಮ ಸಂದೇಶವನ್ನೆಂದೂ ರವಾನಿಸಲಾರವು.

* ಕರ್ನಾಟಕದಲ್ಲಿ ನಾಟ್ಯಶಾಸ್ತ್ರದ ಕರಣಗಳನ್ನಷ್ಟೂ ಅಭ್ಯಾಸ ಮಾಡಿ ಅದರ ಆಯಾಮದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದ ಏಕೈಕ ಕಲಾವಿದೆ, ಸಂಶೋಧಕಿ ಡಾ.ಶೋಭಾ ಶಶಿಕುಮಾರ್. ಪ್ರಸ್ತುತ ಜೈನ್ ವಿಶ್ವವಿದ್ಯಾನಿಲಯದ ಪ್ರದರ್ಶನಕಲಾವಿಭಾಗದ ಸಂಯೋಜಕಿ, ನಾಟ್ಯಶಾಸ್ತ್ರ ಉಪನ್ಯಾಸಕಿ ಮತ್ತು ಸ್ನಾತಕೋತ್ತರ ವಿದ್ಯಾಭ್ಯಾಸದ ಪ್ರೌಢಪ್ರಬಂಧಗಳಿಗೆ, ಪ್ರೌಢ ನೃತ್ಯಪ್ರದರ್ಶನಗಳಿಗೆ ಮಾರ್ಗದರ್ಶಕಿ. ನೂಪುರ ಭ್ರಮರಿ ಸಂಸ್ಥೆಯ ಪ್ರದರ್ಶಕ ವಿಭಾಗ ಮತ್ತು ನಾಟ್ಯಶಾಸ್ತ್ರ ಪ್ರಯೋಗದ ನಿರ್ದೇಶಕಿಯೂ ಹೌದು. ಬೆಂಗಳೂರಿನ ಬನ್ನೇರುಘಟ್ಟ ಸನಿಹದ ಅರಕೆರೆಯಲ್ಲಿ ಮಯೂರಿ ನೃತ್ಯಶಾಲೆಯನ್ನು ಕಟ್ಟಿ ಬೆಳೆಸಿ, ಹಲವು ವಿದ್ಯಾರ್ಥಿಗಳಿಗೆ ಗುರುವೂ ಆಗಿದ್ದಾರೆ. ಇವರಿಗೆ ಫೆಬ್ರವರಿ 28ರಂದು ಪುತ್ತೂರಿನ ಎಂವಿ ಭಟ್ ಸಭಾಭವನ, ಅನುರಾಗ ವಠಾರದಲ್ಲಿ ಕರ್ನಾಟಕ ಸಂಘ ಮತ್ತು ಅನ್ಯಾನ್ಯ ಸಂಘ ಸಂಸ್ಥೆಗಳ ಕೂಡುವಿಕೆಯಲ್ಲಿ ನಡೆದ ಒಂಭತ್ತು ದಿನಗಳ ಸಾಹಿತ್ಯ ಕಲಾಕುಶಲೋಪರಿಯಲ್ಲಿ 'ಅನುರಾಗ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು 15,000ರೂ ಮೌಲ್ಯ ನಗದು, ಪ್ರಶಸ್ತಿ ಫಲಕ, ಪ್ರಶಸ್ತಿ ಪತ್ರ, ಫಲತಾಂಬೂಲ ಒಳಗೊಂಡಿತ್ತು.

ಐದು ದಶಕಗಳಿಗೂ ಮೀರಿದ ಸಮೃದ್ಧ ಸಾಹಿತ್ಯ–ಸಾಂಸ್ಕೃತಿಕ ಇತಿಹಾಸ ಹೊಂದಿದ ದಕ್ಷಿಣಕನ್ನಡದ ಪುತ್ತೂರಿನ ಕರ್ನಾಟಕ ಸಂಘವನ್ನು ಶಿವರಾಮ ಕಾರಂತ, ಬೆಳ್ಳಾವೆ ಶಾಸ್ತ್ರಿಗಳಂತಹ ಮಹನೀಯರು ಹುಟ್ಟುಹಾಕಿ ಬೆಳೆಸಿದ್ದಾರೆ. ಅವಧಾನ ಪ್ರಪಂಚದಲ್ಲಿ ಇಂದಿಗೆ ಮೇರುಶಿಖರವಾಗಿರುವ ಶತಾವಧಾನಿ ಡಾ.ಆರ್. ಗಣೇಶರ 'ಕನ್ನಡದಲ್ಲಿ ಅವಧಾನ ಕಲೆ'ಯೆಂಬ ಗ್ರಂಥದ ಸಹಿತ ಅನೇಕಾನೇಕ ಮಹನೀಯ ಸಾಹಿತಿಗಳ, ಕಲಾವಿದರ ಕೃತಿಗಳನ್ನು ಈ ಸಂಘವು ಪ್ರಕಾಶಿಸಿದೆ. ಪ್ರಸ್ತುತ ದಿನಗಳಲ್ಲಿಯೂ ಸಂಘದ ಚಟುವಟಿಕೆಗಳನ್ನು ಲಕ್ಷ್ಮೀಶ ತೋಳ್ಪಾಡಿ, ಪುರಂದರ ಭಟ್ ಮುಂತಾದ ಮಹನೀಯರು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಸಮಾರೋಪಸಂಜೆಯಲ್ಲಿ ಡಾ.ಶೋಭಾ ಶಶಿಕುಮಾರ್ ಅವರ ಸಂಯೋಜನೆಯಲ್ಲಿ ಭರತನೃತ್ಯ ಪ್ರಸ್ತುತಿಯೂ ಜರುಗಿತು. ಅದರಲ್ಲಿಯೂ ಶತಾವಧಾನಿ ಡಾ. ಆರ್.ಗಣೇಶ್ ವಿರಚಿತ ವಿಶೇಷ ನೃತ್ಯ ರೂಪಕ 'ನವರಸ ಕೃಷ್ಣ' ಮನೋಹರವಾಗಿ ನೃತ್ಯರೂಪಕದ ಆಯಾಮಕ್ಕೇ ಹೊಸ ಸ್ಪರ್ಶ ನೀಡುವಂತೆ ಪ್ರಸ್ತುತಿಗೊಂಡಿತು. ಮೇಘಾ ಕೃಷ್ಣ, ಆರತಿ ವೇಲನ್ ಮತ್ತು ಕೀರ್ತನಾ ಅವರ ಆಂಗಿಕದಲ್ಲರಳಿದ ಕರಣಾದಿಗಳು ಸತ್ತ್ವೋಚಿತವಾಗಿ ಹೊರಹೊಮ್ಮಿತ್ತು. ಅಂತೆಯೇ ಒಟ್ಟು ರೂಪಕದ ಅಭಿನಯವೂ ಸಂವಹನಶೀಲವಾಗಿ, ಅಧ್ಯಯನ ಪೂರ್ಣವಾಗಿ, ವೇದಾಂತ ತತ್ತ್ವಗಳ ನಿಧಿಯಾಗಿ ಶ್ರೀಕೃಷ್ಣನ ಜೀವನ ವನ್ನೇ ಸಮಗ್ರವಾಗಿ ಅನಾವರಣಗೊಳಿಸಿತು. ಡಾ.ಶೋಭಾ ಅವರು ಪ್ರಸ್ತುತಪಡಿಸಿದ ಭೋ ಶಂಭೋ ಎಂಬ ನಟನಶಿವ ತತ್ತ್ವಕೃತಿ, ಅಕ್ಕಮಹಾದೇವಿಯ ವಚನಗಳೂ ಲೋಕಧರ್ಮಿ ಮತ್ತು ನಾಟ್ಯಧರ್ಮಿಯ ಹದವಾದ ಸಾಂಗತ್ಯವನ್ನು ರಸೋನ್ಮುಖವಾಗಿ ಪರಿಚಯಮಾಡಿಸಿದವು. ಕೊನೆಯಲ್ಲಿ ಧನಶ್ರೀ ರಾಗದ ತಿಲ್ಲಾನವೂ ಮನಸೆಳೆಯಿತು. ಆದರೆ ಸಭಾಕಾರ್ಯಕ್ರಮಗಳ ಅವಿಶ್ರಾಂತ ಭಾಷಣಗಳು ಹದವಾದ ಸಮಯವನ್ನು ಕಾಯ್ದುಕೊಂಡರೆ ಸುಗಮ, ಅನಾಯಾಸದ ಆಸ್ವಾದನೆಗೆ ಅನುಕೂಲಕರ.

ಈ ಕಲಾಕುಶಲೋಪರಿಯ ಮೊದಲನೆಯ ದಿನದ (20 ಫೆಬ್ರವರಿ) ನೃತ್ಯಪ್ರಸ್ತುತಿಯನ್ನು ಮಂಗಳೂರಿನ ರಂಗಭಾರತಿಯ ಅಯನಾ ರಮಣ್ ಮತ್ತು ವೇೂನಿಕಾ ರಾವ್ ಪ್ರತಿಭಾಶೀಲವಾಗಿ ನಿರ್ವಹಿಸಿದರಾದರೂ ಭವಿಷ್ಯದ ನಿರಂತರ ಯಶಸ್ಸಿಗೆ ಅನುಕರಣೆಯಿಲ್ಲದ ಸ್ವಂತಿಕೆ, ಸಾತ್ತ್ವಿಕ ಮನೋಧರ್ಮ, ರಂಗೌಚಿತ್ಯ, ಕಲಾಸಿದ್ಧಿ ಮತ್ತು ಅದಕ್ಕೆ ತಕ್ಕ ಪ್ರಯೋಗವನ್ನೂ ಮೀರಿ ನಿಲ್ಲಬಲ್ಲ ತಾಳ್ಮೆಯ ಕಲಿಕೆ ನಿಶ್ಚಯವಾಗಿಯೂ ಅಪೇಕ್ಷಣೀಯ. ನಿರೂಪಣೆಯಲ್ಲಿಯೂ ರಂಗಸ್ವಾದನೆಗೆ ಭಂಗ ಬಾರದ ನಿರ್ವಹಣೆಯಿದ್ದರೆ ದೃಶ್ಯಾನುಕೂಲ.

# ಹಸ್ತ ಮಯೂರಿ

**(ಸಂಪಾದಕಿ ಮನೋರಮಾ ಬಿ.ಎನ್ ಅವರ ಹಸ್ತಮುದ್ರೆಗಳ ಕುರಿತ ಸಂಶೋಧನ ಗ್ರಂಥ 'ಮುದ್ರಾರ್ಣವ'ದಿಂದಾಯ್ದ ಸರಣಿ ಅಧ್ಯಯನಲೇಖನ)**

**ಲಕ್ಷಣ: ಅಭಿನಯದರ್ಪಣ ಗ್ರಂಥದ ಪ್ರಕಾರ ಅರ್ಧಚಂದ್ರ ಹಸ್ತಗಳನ್ನು ಅಂಗೈಭಾಗವು ತನಗೆ ಅಭಿಮುಖವಾಗಿರುವಂತೆ ಅಡ್ಡಲಾಗಿ ಹಿಡಿದು ಸ್ವಸ್ತಿಕಾಕಾರಮಾಡಿ ಹೆಬ್ಬೆರಳನ್ನು ಕೊಂಡಿಯಂತೆ ಸೇರಿಸುವುದು.** ಇದರ ವಿನಿಯೋಗ : ಗರುಡ. ನಿತ್ಯಜೀವನದಲ್ಲಿ ಈ ಹಸ್ತವನ್ನು ಹಕ್ಕಿ ಹಾರಾಡುವುದು ಎಂದು ಸೂಚಿಸಲು ಬಳಸುತಾರೆ.


ಗರುಡಹಸ್ತ

ಕಥಕ್, ಕೂಚಿಪುಡಿ, ಯಕ್ಷಗಾನಾದಿಯಾಗಿ ಗರುಡಪಕ್ಷಿಯನ್ನು ಒಳಗೊಂಡಂತೆ ಪಕ್ಷಿಸಂಕುಲದ ಅಭಿನಯಕ್ಕೆ ಈ ಹಸ್ತವನ್ನು ಬಳಸುತ್ತಾರೆ. ಮಣಿಪುರಿ ನೃತ್ಯ ದಲ್ಲಿ ಗರುಡಹಸ್ತಕ್ಕೆ **ಕೋಕಿಲ**ವೆಂಬ ಹೆಸರನ್ನು ಸೂಚಿಸಿದ್ದಾರೆ. **ಪೂಜಾಮುದ್ರೆ**ಗಳಲ್ಲಿ ಬಳಸುವ ಗರುಡ ಮುದ್ರಾದ ಲಕ್ಷಣ ಕೊಂಚ ಭಿನ್ನವಾಗಿದ್ದು; ಎರಡೂ ಕೈಯ್ಯನ್ನು ಹಿಂಬಂದಿಯಿಂದ ಕತ್ತರಿಯಂತೆ ಮಾಡಿ ಅಂಗೈಯನ್ನು ಹೊರಮುಖವಾಗಿರಿಸಿ, ತೋರು ಮತ್ತು ಕಿರು ಬೆರಳನ್ನು ಆಯಾಯ ಬೆರಳಿಗೆ ಹೆಣೆದು, ಉಳಿದ ಬೆರಳುಗಳನ್ನು ಸ್ವಲ್ಪ ಬಗ್ಗಿಸಲಾಗುತ್ತದೆ. ಪತಾಕ ಹಸ್ತಗಳನ್ನು ಮೇಲ್ಮುಖವಾಗಿ ಒಂದರ ಪಕ್ಕದಲ್ಲೊಂದನ್ನು ಹಿಡಿಯುವುದನ್ನೂ ಗರುಡಹಸ್ತವೆಂದು ಭರತಕಲ್ಪಲತಾ ಮಂಜರಿಯೆಂಬ ಗ್ರಂಥದಲ್ಲಿ ತಿಳಿಸಲಾಗಿದೆ. ಈ ಗ್ರಂಥದ ಗರುಡಹಸ್ತದ ವಿನಿಯೋಗವು ಗರುಡಧ್ಯಾನ, ಬ್ರಹ್ಮಧ್ಯಾನ, ಆಕಾಶ, ದೊಡ್ಡವರ ಉಪಚಾರ, ಕಷ್ಟವನ್ನು ಅರಿಕೆ ಮಾಡಿಕೊಳ್ಳುವುದು, 'ನನ್ನ ಕೈಯಲ್ಲೇನೂ ಇಲ್ಲ' ಎಂಬರ್ಥ, ಮರೆತು ಹೋದ ವಸ್ತುವನ್ನು ಹುಡುಕುವುದು, ಭಯ, ಯಾಚನೆ, ವಸ್ತ್ರ ಮತ್ತು ಮಾಲೆಗಳನ್ನು ಸ್ವೀಕರಿಸುವುದು.

ಈ ಗರುಡಹಸ್ತಕ್ಕೆ ಪರ್ಯಾಯವಾಗಿ **ತಾರ್ಕ್ಷ್ಯ** ಎಂಬ ಹಸ್ತವನ್ನೂ ಮಣಿಪುರಿ, ಯಕ್ಷಗಾನ ಇತ್ಯಾದಿ ಕಲಾಪ್ರಕಾರಗಳಲ್ಲಿ (ಎರಡು ಕೈಯ ಮಣಿಕಟ್ಟನ್ನು ಸೇರಿಸಿ ಹೊರಮುಖವಾಗಿ ಅಂಗೈಯನ್ನು ಹಿಡಿಯುವುದು ಅಥವಾ ಹಂಸಪಕ್ಷಗಳನ್ನು ಮಣಿಕಟ್ಟಿನ ಬಳಿ ಅಡ್ಡಲಾಗಿ ಬಂಧಿಸುವುದು.) ಬಳಸುವುದಿದೆ. ಇದು ಗರುಡ, ಹದ್ದು, ಪ್ರೇಮ, ಒಲವಿನ ಸೂಚನೆಗೆ ಬಳಕೆಯಾಗುತ್ತದೆ. ಈ ತಾರ್ಕ್ಷ್ಯಯು ಪೂಜಾಮುದ್ರೆಯಾಗಿಯೂ ಬಳಕೆಯಾಗುವುದರಿಂದ; ಇದನ್ನು ಮುದ್ರೆಯೆಂದೇ ಸಂಬೋಧಿಸಲಾಗಿದೆ. ಒಂದು ಕೈಯ್ಯ ತೋರುಬೆರಳಿಗೆ ಇನ್ನೊಂದು ಕೈಯ್ಯ ತೋರುಬೆರಳನ್ನೂ, ಕಿರುಬೆರಳಿಗೆ ಇನ್ನೊಂದು ಕೈಯ್ಯ ಕಿರುಬೆರಳನ್ನು ಗಂಟು ಹಾಕಿದಂತೆ ಬೆಸೆದು ಉಳಿದ ಬೆರಳುಗಳನ್ನು ಸ್ವಲ್ಪ ಬಾಗಿಸುವುದು ಪೂಜಾಮುದ್ರೆಗಳಲ್ಲಿರುವ ತಾರ್ಕ್ಷ್ಯ ಮುದ್ರೆಯ ಕ್ರಮ. ಸನಾತನಧರ್ಮದ ಆಗಮೋಕ್ತ ಕಲಶಪೂಜಾ ವಿಧಾನದಲ್ಲಿ ಇರುವ ಪಂಚ ಮುದ್ರೆಗಳ ಪೈಕಿ ಮೊದಲನೆಯ 'ನಿರ್ವಿಷೀಕರಣಾರ್ಥಂ'ಗೆ ತಾರ್ಕ್ಷ್ಯ ಮುದ್ರೆಯ ಬಳಕೆಯನ್ನು ಸೂಚಿಸಲಾಗಿದೆ.

ಭರತನ ನಾಟ್ಯಶಾಸ್ತ್ರದಲ್ಲಿ **ಗರುಡಪಕ್ಷ**ವೆಂಬ ಹೆಸರುಳ್ಳ ನೃತ್ತಹಸ್ತವನ್ನು ಸೂಚಿಸಲಾಗಿದ್ದು; ಅಲ್ಲಿ ಈ ಹಸ್ತಕ್ಕೆ ಆಂಗಿಕ ಚಲನೆಗಳ ಕ್ರಮವನ್ನು ಹೇಳಲಾಗಿದೆ. ಗರುಡವನ್ನೂ ಒಳಗೊಂಡಂತೆ ಪಕ್ಷಿ ಸಂಕುಲದ ಕುರಿತ ಅಭಿನಯ ಸನ್ನಿವೇಶಗಳಲ್ಲಿ ಇದರ ಬಳಕೆಯಿದೆ. ಇದು ಲೋಕದ ಎಲ್ಲ ಬಗೆಯ ನೃತ್ಯ-ನಾಟ್ಯಾದಿ ಸಂದರ್ಭಗಳಲ್ಲಿ ಸಾರ್ವಕಾಲಿಕವಾಗಿ ಕಂಡುಬಂದಿದೆ. ವಿಶೇಷವಾಗಿ ಈ ಹಸ್ತದ ಬಳಕೆ ಗರುಡಪ್ಲುತಕ, ವೈಶಾಖರೇಚಿತದಂತಹ ಕರಣಾದಿಗಳಲ್ಲಿ ಇದೆ.

## ಲಲಿತ ಲಹರಿ

# ನಾಟ್ಯಶಾಸ್ತ್ರ ಕಥನ ಮಾಲಿಕೆ

*– ಕಾವ್ಯ/ಸಾಹಿತ್ಯ–ಸಂಯೋಜನೆ : ಮನೋರಮಾ ಬಿ.ಎನ್*

*– ಸಂಸ್ಕೃತ ಶ್ಲೋಕಗಳು : ನಾಟ್ಯಶಾಸ್ತ್ರ (ಭರತಮುನಿ)*

**ಭ**ರತಮುನಿ– ಸಮಗ್ರವಿಶ್ವಕಾವ್ಯಮೀಮಾಂಸೆಗೆ ಚೂಡಾಮಣಿಯಂತಿರುವ ನಾಟ್ಯಶಾಸ್ತ್ರದ ರಚನಕಾರ. ಅಲಂಕಾರಶಾಸ್ತ್ರದ ಐತಿಹಾಸಿಕ ವಿಕಾಸಕ್ಕೆ ತಾಯಿಬೇರಾದ ಪುಣ್ಯಪುರುಷ. ಸೌಂದರ್ಯಮೀಮಾಂಸೆಗಳಿಗೆ ಆರ್ಷಮೂಲದ ಜೀವಸ್ರೋತಸ್ಸು. ಭಾರತೀಯ ಸೌಂದರ್ಯಶಾಸ್ತ್ರಸೌಧದ ಸ್ವರ್ಣಶಿಖರದಂತಿರುವ ರಸತತ್ತ್ವವನ್ನು ಧಾರೆಯೆರೆದ ಕಾರಣಪುರುಷ. ನಾಟ್ಯಮಂಡಪದ ಆದ್ಯ ಪ್ರವರ್ತಕ. ಭಾರತದೇಶವಷ್ಟೇ ಅಲ್ಲ, ಅಖಂಡ ಭೂಮಂಡಲದ ಸಾಂಸ್ಕೃತಿಕ, ಸಾಹಿತ್ಯಜೀವಿಗಳ ಪಿತಾಮಹ. ಬೇರೆ ಬೇರೆ ಕಾಲ, ದೇಶಕ್ಕೆ ತಕ್ಕಂತೆ ಸಾರ್ವಕಾಲಿಕವಾಗಿ ಕಲೆಯ ವಿಶಿಷ್ಟ ಮಾದರಿಗಳನ್ನು, ಸಾಧ್ಯತೆಗಳನ್ನು ಕಟ್ಟಿಕೊಟ್ಟ ಭರತರ್ಷಿ ಯತಾರ್ಥದಲ್ಲಿಯೂ ಕಲಾಸರಸ್ವತಿಯ ರಾಯಭಾರಿ. ಆತನ ವ್ಯಕ್ತಿತ್ವ, ಸೂತ್ರ, ಕರ್ತೃತ್ವ ಎಲ್ಲವೂ ಬಗೆದದ್ದು ತಾರೆ ಉಳಿದದ್ದು ಆಕಾಶ ಎಂಬ ಮಾತಿಗೆ ಅನ್ವರ್ಥ.



ಆದ್ದರಿಂದಲೇ ಭರತಮುನಿಯಿಂದ ಬರೆಯಲ್ಪಟ್ಟ ನಾಟ್ಯಶಾಸ್ತ್ರ ಭರತಸೂತ್ರವೆಂಬುದಾಗಿಯೂ ಪ್ರಚಲಿತ. ಕಲಾವಿಶ್ವಕೋಶ, ಸಂಸ್ಕೃತಿಸರ್ವಸ್ವಸಂಗ್ರಹವಾಗಿ, ಎಲ್ಲ ಕಾಲಕ್ಕೂ ಸಲ್ಲುವ ತತ್ತ್ವ–ಪ್ರಯೋಗನಿಧಿಯಾಗಿ, ಸಮಗ್ರ ದರ್ಶನಸಿದ್ಧಾಂತದ ಪ್ರತಿರೂಪವಾಗಿ ನಾಟ್ಯಶಾಸ್ತ್ರವು ಸರ್ವಕಾಲಕ್ಕೂ ಆದರಣೀಯ. ಭಾರತೀಯ ಸಂಸ್ಕೃತಿಯ ಸಮಗ್ರತೆಗೆ ಸಂಬಂಧಿಸಿದಂತೆ ನಾಟ್ಯಶಾಸ್ತ್ರದ ಮೌಲ್ಯ ಮಹೋನ್ನತವಾದದ್ದು. ನಾಟ್ಯದ ಉತ್ಪತ್ತಿ, ಪ್ರಯೋಗ, ಅಂಗಗಳು ಮೊದಲಾದವನ್ನು ಕುರಿತು ಹೇಳದೇ ಉಳಿದ ವಿಷಯವೆಂಬುದು ಯಾವುದೂ ಅದರಲ್ಲಿಲ್ಲ. ನಾಟ್ಯಪ್ರಪಂಚವಷ್ಟೇ ಅಲ್ಲ, ಕಾವ್ಯಮೀಮಾಂಸೆ, ಅಲಂಕಾರಶಾಸ್ತ್ರದ ಪ್ರಥಮ ಕುಸುಮಗಳು ಕುಡಿಯೊಡೆದದ್ದು ಭರತನ ಬೊಗಸೆಯಲ್ಲಿ. ಹಾಗಾಗಿ ಕಾವ್ಯಲಕ್ಷಣಕಾರರಿಗೆಲ್ಲಾ ಭರತನೇ ಪ್ರಥಮಗುರುವಾಗಿ ವಂದ್ಯನಾಗಿದ್ದಾನೆ.

ಪ್ರಸ್ತುತ ಈ ನಾಟ್ಯಶಾಸ್ತ್ರಕಥನಮಾಲಿಕೆಯು 36 ಅಧ್ಯಾಯದ ಪರ್ಯಂತ ಹಬ್ಬಿರುವ ನಾಟ್ಯಶಾಸ್ತ್ರದೊಳಗೆ ಬರುವಂತಹ ಭಾರತೀಯ ಸಂಸ್ಕೃತಿಯ, ನಾಟ್ಯಕಲೆಯ ಕುರಿತಾದ ಆಕರ್ಷಕ ಕಥೆಗಳನ್ನು ಪ್ರತೀ ಸಂಚಿಕೆಗೆ ನಿಮ್ಮ ಮುಂದೆ ಅನಾವರಣಗೊಳಿಸುತ್ತಾ ಸಾಗಲಿದೆ. ಅದಕ್ಕೆ ಪೂರಕವಾಗಿ ಪುತ್ತೂರಿನಲ್ಲಿ ನಡೆದ 'ನಾಟ್ಯಚಿಂತನ' ಕಾರ್ಯಾಗಾರದ ಸಮಯದಲ್ಲಿ ಬರೆಯಲಾದ ನಾಟ್ಯಶಾಸ್ತ್ರಕಥೆಗಳ ಕಾವ್ಯಮಾಲಿಕೆ ಮತ್ತು ಕಥೆಯ ಅಧ್ಯಾಯದ ಸಂಕ್ಷಿಪ್ತ ವಿವರವನ್ನು 'ಮಹಾಮುನಿ ಭರತ' ಎಂಬ ಕೃತಿಯಿಂದ ಆಯ್ದು ಪ್ರಕಟಿಸಲಾಗುತ್ತದೆ. ಇದು ಆಸಕ್ತ ಕಲಾವಿದರಿಗೆ, ನೃತ್ಯಸಂಯೋಜನೆಯ ಪ್ರತಿಭೆಯನ್ನಿಟ್ಟುಕೊಂಡು ಸಾಹಿತ್ಯಕ್ಕಾಗಿ ಅರಸುತ್ತಿರುವ ಗುರು–ಶಿಕ್ಷಕರಿಗೆ, ವಿದ್ಯಾರ್ಥಿಮಿತ್ರರಿಗೆ, ಚಿಣ್ಣರ ಕುತೂಹಲದ ಕಥಾಪ್ರಪಂಚಕ್ಕೆ, ಕಲಾಪ್ರೇಮಿಗಳಾದ ಸಹೃದಯ ಓದುಗರಿಗೆ ಒಳ್ಳೆಯ ರಸಾಹಾರವನ್ನು ಕೊಡಲಿದೆ ಎಂಬುದು ನಮ್ಮ ಅಭೀಪ್ಸೆ. ನಮ್ಮ ಆಶಯಕ್ಕೆ ತಾವೂ ಇಂಬುಕೊಡುತ್ತೀರಲ್ವಾ? –ಸಂ.

## ಪ್ರಥಮ ಅಧ್ಯಾಯ– ನಾಟ್ಯಶಾಸ್ತ್ರೋತ್ಪತ್ತಿ

## *ಭಾಗ 3– ನಾಟ್ಯದ ಪ್ರಥಮ ಪ್ರಯೋಗ*

ಕಳೆದ ಸಂಚಿಕೆಗಳಲ್ಲಿ ನಾಟ್ಯೋತ್ಪತ್ತಿ ಮತ್ತು ಅಪ್ಸರಸೃಷ್ಟಿಯೆಂಬ ಮೊದಲೆರಡು ಭಾಗವನ್ನು ನಿರೂಪಿಸಲಾಗಿತ್ತು. ಆರ್ಭಟೀ, ಸಾತ್ತ್ವತೀ, ಭಾರತೀ, ಕೈಶಿಕೀ ಚತುರ್ವೃತ್ತಿಗಳನ್ನು ಹದವಾಗಿ ಯೋಜಿಸಿದ ಭರತನು ನಟ–ನಟಿಯರನ್ನು ಸಂಘಟಿಸಿ ನಾಟ್ಯವನ್ನು ಕಲಿಸಿ, ಶಾಸ್ತ್ರದ ಪೂರ್ಣಫಲವನ್ನು ಕಾಣಲೋಸುಗ ನಾಟ್ಯವನ್ನು ಪ್ರಯೋಗಿಸುವ ಮನಸ್ಸು ಮಾಡುತ್ತಾನೆ. ಅದೇ ಸಮಯಕ್ಕೆ ಬ್ರಹ್ಮನ ಅಭಿಪ್ರಾಯದ ಮೇರೆಗೆ ಇಂದ್ರಧ್ವಜಮಹೋತ್ಸವದಲ್ಲಿ ಮಹೇಂದ್ರವಿಜಯವನ್ನು ಸೂಚಿಸುವ ಪ್ರಥಮ ನಾಟ್ಯಪ್ರಯೋಗಕ್ಕೆ ಭರತ ಸಿದ್ಧಗೊಳಿಸುತ್ತಾನೆ. ದೇವತೆಗಳಿಗೆ ಪ್ರಿಯವಾಗುವ ಅಷ್ಟಾಂಗಪದವಿನ್ಯಾಸದ ದೇವತೆಗಳು ಗೆದ್ದು, ದೈತ್ಯರು ಸೋತು ಓಡಿ ಹೋಗುವ ಕಥೆಗೆ ನಾಟ್ಯವಾಡಿಸುತ್ತಾನೆ.

ಇದನ್ನು ಕಂಡು ಸಂತೋಷಭರಿತರಾದ ನಾನಾ ದೇವತೆಗಳು ತಮಗೆ ತೋಚಿದ ಪಾರಿತೋಷಕಗಳನ್ನು ಪ್ರದಾನ ಮಾಡುತ್ತಾರೆ. ಇವೆಲ್ಲ ಪಾರಿತೋಷಕಗಳು ನಾಟ್ಯಕ್ಕೆ ಉಪಯೋಗಿಸುವಂತೆ ಪರಿಕರಗಳೇ ಆಗಿರುತ್ತವೆ ಎನ್ನುವುದು ಇಲ್ಲಿನ ವಿಶೇಷ. ಆದರೆ ನಾಟ್ಯದಲ್ಲಿ ತಮ್ಮನ್ನು ನಿಂದಿಸಿದ್ದಾರೆ ಎಂಬುದನ್ನೇ ಗ್ರಹಿಸಿದ ದಾನವರು ಕ್ರುದ್ಧರಾಗಿ ವಿಘ್ನಗಳನ್ನು ತಂದರು. ಅದರಿಂದ ನಾಟ್ಯರಂಗವು ಅಸ್ತವ್ಯಸ್ತವಾಗಿ ಸೂತ್ರಧಾರನ ಸಹಿತ ನಟರು ಮೂರ್ಛಿತರಾಗಿ ಬಿದ್ದರು. ಇದನ್ನು ಗಮನಿಸಿದ ಇಂದ್ರನು ದಿವ್ಯದೃಷ್ಟಿಯಿಂದ ಇದು ದೈತ್ಯರ ಕೆಲಸವೆಂದು ಅರಿತು ಆ ವಿಘ್ನಗಳನ್ನು ತನ್ನ ವಜ್ರಾಯುಧದಿಂದ ಜರ್ಜರಗೊಳಿಸಿದನು. ಈ ಆಯುಧವು ವಿಘ್ನಗಳನ್ನು ಜರ್ಜರಿತವನ್ನಾಗಿಸಿದುದರಿಂದ ಜರ್ಜರವೆಂದೇ ಹೆಸರಾಗಿ ಕ್ರಮೇಣ ನಾಟ್ಯಾರಂಭದಲ್ಲಿ ಪೂಜೆಗೊಳಪಡುವಂತಾಯಿತು.

ನಂತರದಲ್ಲಿ ಬ್ರಹ್ಮನ ಆಜ್ಞೆಯ ಮೇರೆಗೆ ವಿಶ್ವಕರ್ಮನು ಹೊಸದಾಗಿ ನಾಟ್ಯಸಭಾಗೃಹ ನಿರ್ಮಾಣವನ್ನು ಮಾಡುತ್ತಾನೆ. ಇದರೊಂದಿಗೆ ದೇವತೆಗಳಿಂದ ರಕ್ಷಣೆಯರೂಪದಲ್ಲಿ ಪರಿಹಾರೋಪಾಯಗಳು ದೊರಕುತ್ತವೆ. ಒಬ್ಬೊಬ್ಬ ದೇವ–ದೇವಿ–ದೇವತೆಗಳೂ ರಂಗದ ಒಂದೊಂದು ಭಾಗ–ಅಂಗಕ್ಕೆ ರಕ್ಷಣೆಯಾಗಿ ನಿಲ್ಲುತ್ತಾರೆ. ಇಷ್ಟೇ ಅಲ್ಲದೆ ಯಾವುದೇ ವಿಘ್ನಗಳು ಮುಂದಕ್ಕೊದಗಬಾರದೆಂದು ದಾನವರ ಸಹಿತ ಅವರ ನಾಯಕನಾದ ವಿರೂಪಾಕ್ಷನನ್ನು ಕರೆಸಿ ತಮಗೆ ದಾನವರೂ, ದೇವತೆಗಳು ಈರ್ವರಲ್ಲೂ ಒಂದೇ ಭಾವವಿದೆಯೆಂದು ಬ್ರಹ್ಮನು ನಾಟ್ಯದ ಉದ್ದೇಶ–ಪ್ರಯೋಜನ–ಕರ್ತವ್ಯ– ಪ್ರೇಕ್ಷಣೀಯತ್ವದ ದಿಕ್ಕುಗಳ ಕುರಿತು ಸಮಾಧಾನವನ್ನು ಹೇಳುತ್ತಾನೆ.

ಹೀಗೆ ಅಧ್ಯಾಯದ ಕೊನೆಗೆ ಬ್ರಹ್ಮೋಕ್ತವಾದ ನಾಟ್ಯದ ಉದ್ದೇಶ, ಸ್ವರೂಪಗಳು ನಾಟ್ಯದ ಕುರಿತಾಗಿ ದಾನವಾದಿ ರಾಕ್ಷಸರಿಗೆ ಇದ್ದ ಅಪಕಲ್ಪನೆಗಳನ್ನು ದೂರಮಾಡಿ ಸಮಾಧಾನ ಹೇಳಿದುದಷ್ಟೇ ಅಲ್ಲ; ಅವುಗಳ ಒಂದೊಂದು ಶಬ್ದಗಳೂ ಕೂಡಾ ಭವಿಷ್ಯದಲ್ಲಿ ಹಲವು ವ್ಯಾಖ್ಯಾನಗಳಿಗೆ ಆಧಾರಸ್ವರೂಪವಾಗಿ ಅಜರಾಮರವಾಗಿವೆ. ಅವುಗಳ ಪೈಕಿ ಬ್ರಹ್ಮ ಹೇಳಿದನೆನ್ನಲಾದ ಕೆಲವು ಭರತೋಕ್ತಿಗಳು ಕೆಳಗಿನಂತಿದ್ದು; ನಾಟ್ಯಾದರ್ಶಪ್ರಾಯವಾಗಿವೆ.

***ನೈಕಾಂತತೋತ್ರ ಭವತಾಂ ದೇವಾನಾಂ ಚಾತ್ರ ಭಾವನಮ್***
***ತ್ರೈಲೋಕ್ಯಸ್ಯಾಸ್ಯ ಸರ್ವಸ್ಯ ನಾಟ್ಯಂ ಭಾವಾನುಕೀರ್ತನಮ್***

**ನಾಟ್ಯವು ದೇವತೆಗಳನ್ನಾಗಲೀ, ದಾನವರನ್ನಾಗಲೀ ಗುರಿಯಾಗಿಸಿಲ್ಲ. ಇದು ಮೂರು ಲೋಕಗಳ ಭಾವಾನುಕೀರ್ತನವಾಗಿದೆ.** ಅಂದರೆ ನಾಟ್ಯವೆಂಬುದು ಅನುಕರಣದಂತೆ ಯಥಾವತ್ ನೋಡಿ ವ್ಯವಹರಿಸುವುದಲ್ಲ. ಅನುಕೀರ್ತನ, ಅನುವ್ಯವಸಾಯ ಎಂಬರ್ಥದಲ್ಲಿ ಪ್ರಯೋಗವಾಗಿದ್ದು; ತಿಳಿದು ಮಾಡುವುದು, ಕೀರ್ತಿಸುವುದು ಎಂಬ ಆಶಯದಲ್ಲಿದೆ.

*ಕ್ವಚಿದ್ಧರ್ಮಃ ಕ್ವಚಿತ್ಕ್ರೀಡಾ ಕ್ವಚಿದರ್ಥಃ ಕ್ವಚಿಚ್ಛಮಃ*
*ಕ್ವಚಿದ್ಧಾಸ್ಯಂ ಕ್ವಚಿದ್ಯುದ್ಧಂ ಕ್ವಚಿತ್ಕಾಮ ಕ್ವಚಿದ್ವಧಃ*
*ಧರ್ಮೋಧರ್ಮಪ್ರವರ್ತಾನಾಂ ಕಾಮಃ ಕಾಮೋಪಸೇವಿನಾಮ್*
*ನಿಗ್ರಹೋ ದುರ್ವಿನೀತಾನಾಂ ವಿನೀತಾನಾಂ ದಮಕ್ರಿಯಾ*
*ಕ್ಲೀವಾನಾಂ ಧಾರ್ಷ್ಟ್ಯಕರಣಮುತ್ಸಾಹಃ ಶೂರಮಾನಿನಾಮ್*
*ಅಬುಧಾನಾಂ ವಿಬೋಧಶ್ಚ ವೈದುಷ್ಯಂ ವಿದುಷಾಮಪಿ*
*ಈಶ್ವರಾಣಾಂ ವಿಲಾಸಶ್ಚ ಸ್ಥೈರ್ಯಂ ದುಃಖಾರ್ದಿತಸ್ಯ ಚ*
*ಅರ್ಥೋಪಜೀವಿನಾಮರ್ಥೋ ಧೃತಿರುದ್ವಿಗ್ನಚೇತಸಾಮ್*

**ಕೆಲವೊಮ್ಮೆ ಧರ್ಮ, ಕೆಲವೊಮ್ಮೆ ಕ್ರೀಡೆ, ಕೆಲವೊಮ್ಮೆ ಅರ್ಥ, ಕೆಲವೊಮ್ಮೆ ಶಾಂತಿ, ಕೆಲವೊಮ್ಮೆ ಹಾಸ್ಯ, ಕೆಲವೊಮ್ಮೆ ಯುದ್ಧ, ಕೆಲವೊಮ್ಮೆ ಕಾಮ, ಕೆಲವೊಮ್ಮೆ ವಧೆ– ಹೀಗೆ ಎಲ್ಲದರ ಕುರಿತಾಗಿದೆ ನಾಟ್ಯ. ಅಧರ್ಮಿಗಳಿಗೆ ಧರ್ಮವನ್ನೂ, ಆಸೆ–ಕಾಮ–ಗುರಿಯನ್ನು ಹೊತ್ತವರಿಗೆ ಅದರ ಪೂರ್ಣತ್ತ್ವವನ್ನೂ, ದುರ್ನಡತೆಯವರಿಗೆ ನಿಗ್ರಹ–ಒಳ್ಳೆಯತನವನ್ನೂ, ಅಶಾಂತಿಯುಳ್ಳವರಿಗೆ ಸಹನೆಯನ್ನೂ, ಪುಕ್ಕಲರಿಗೆ ಧೈರ್ಯವನ್ನೂ, ಶೂರರಿಗೆ ಉತ್ಸಾಹವನ್ನೂ, ದಡ್ಡರಿಗೆ ತಿಳಿವಳಿಕೆಯನ್ನೂ, ವಿದ್ವಾಂಸರಿಗೆ ವೈದುಷ್ಯತೆಯನ್ನೂ ನೀಡುತ್ತದೆ. ಧನವುಳ್ಳರಿಗೆ ಒಳ್ಳೆಯ ವಿಲಾಸವನ್ನು, ದುಃಖಿತರಿಗೆ ಸ್ಥೈರ್ಯವನ್ನೂ, ನಿರ್ಗತಿಕರಿಗೆ ಧನಾರ್ಜನೆಗೆ ದಾರಿಯನ್ನೂ, ಉದ್ವಿಗ್ನರಿಗೆ ಸ್ಥಿರಬುದ್ಧಿ, ಮನಃಸ್ವಾಸ್ಥ್ಯವನ್ನೂ ಇದು ನೀಡುವುದು.–** ಅಂದರೆ ಯೋಗ್ಯತೆ, ಅವಸ್ಥೆ, ವ್ಯಕ್ತಿತ್ತ್ವಗಳಿಗೆ ಅನುಗುಣವಾಗಿ ಸಮಯೋಚಿತವಾಗಿ ಯಾರಿಗೆ ಏನೇನು ಅಗತ್ಯವೋ ಅವನ್ನು ನಾಟ್ಯವು ನೀಡುವಷ್ಟು ಶಕ್ತತೆ ಹೊಂದಿದೆ.

*ನಾನಾಭಾವೋಪಸಂಪನ್ನಂ ನಾನಾವಸ್ಥಾಂತರಾತ್ಮಕಮ್*
*ಲೋಕವೃತ್ತಾನುಕರಣಂ ನಾಟ್ಯಮೇತನ್ಮಯಾ ಕೃತಮ್*
*ಉತ್ತಮಾಧಮಮಧ್ಯಾನಾಂ ನರಾಣಾಂ ಕರ್ಮಸಂಶ್ರಯಮ್*
*ಹಿತೋಪದೇಶಜನನಂ ಧೃತಿಕೀಡಾಸುಖಾದಿಕೃತ್*
*ಏತದ್ರಸೇಷು ಭಾವೇಷು ಸರ್ವಕರ್ಮಕ್ರಿಯಾಸು ಚ*
*ಸರ್ವೋಪದೇಶಜನನಂ ನಾಟ್ಯಭೇತದ್ಭವಿಷ್ಯತಿ*
*ದುಃಖಾರ್ತಾನಾಂ ಶ್ರಮಾರ್ತಾನಾಂ ಶೋಕಾರ್ತಾನಾಂ ತಪಸ್ವಿನಾಮ್*
*ವಿಶ್ರಾಮಜನನಂ ಲೋಕೇ ನಾಟ್ಯಮೇತದ್ಭವಿಷ್ಯತಿ*
*ಧರ್ಮ್ಯಂ ಯಶಸ್ಯಮಾನುಷ್ಯಂ ಹಿತಂ ಬುದ್ಧಿವಿವರ್ಧನಮ್*
*ಲೋಕೋಪದೇಶಜನನಂ ನಾಟ್ಯಮೇತದ್ಭವಿಷ್ಯತಿ*

**ನಾಟ್ಯವೆಂಬುದು ನಾನಾಭಾವಸಂಪನ್ನವಾಗಿದ್ದು ಬೇರೆ ಬೇರೆ ಅವಸ್ಥೆಗಳನ್ನು ಪರಿಗ್ರಹಿಸುತ್ತದೆ. ಲೋಕದ ನಡೆನುಡಿಗಳ ಅನುಕರಣವೇ ಆದ ನಾಟ್ಯವು ನನ್ನಿಂದ ಸೃಷ್ಟಿಸಲ್ಪಟ್ಟಿದೆ. ಉತ್ತಮ, ಮಧ್ಯಮ, ಅಧಮ ಜನರ ಕರ್ಮಸಂಶ್ರಯಕ್ಕೆ ಅನುಗುಣವಾಗಿ ಹಿತವಾದ ಉಪದೇಶವನ್ನು ರಸ, ಭಾವ, ಕರ್ಮ, ಕ್ರಿಯೆಗಳಿಂದೊಡಗೂಡಿ ಧೃತಿ, ವಿನೋದ, ಸುಖಗಳನ್ನು ನೀಡುವುದು ನಾಟ್ಯ. ದುಃಖಿಗಳಿಗೆ, ದಣಿದವರಿಗೆ, ಶೋಕಪೀಡಿತರಿಗೆ, ಹೀಗೆ ಲೋಕದ ಎಲ್ಲರಿಗೂ ಚೈತನ್ಯವನ್ನು ನೀಡುವುದೇ ನಾಟ್ಯ. ಧರ್ಮಕ್ಕೆ, ಯಶಸ್ಸಿಗೆ, ಆಯುಷ್ಯಕ್ಕೆ, ಹಿತಕ್ಕೆ, ಬುದ್ಧಿವಿವರ್ಧನೆಗೆ, ಲೋಕಕ್ಕೆ ಉಪದೇಶಾರ್ಥವಾಗಿ ಇರುವುದು ನಾಟ್ಯ.** – ಎಂದಲ್ಲಿಗೆ ಕಾಲಕ್ಕನುಗುಣವಾಗಿ ಹಿತೋಪದೇಶ ನೀಡುವ ಕ್ರಮವೂ ನಾಟ್ಯವನ್ನು ಹಿಂಬಾಲಿಸಿ ಬರುತ್ತದೆ ಎಂಬುದನ್ನು ಅರ್ಥೈಸಿಕೊಳ್ಳಬಹುದು.

ಇಲ್ಲಿ ಸರಳವಾಗಿ ಹೇಳಲಾದ ಕಲೆಯ ಪ್ರಸ್ತುತತೆ, ಉಪಯೋಗದ ಕುರಿತು ಭರತೋತ್ತರ ಕಾಲದಲ್ಲಿ ಅದರಲ್ಲೂ ಮುಖ್ಯವಾಗಿ ಪಾಶ್ಚಾತ್ಯ ಕಾವ್ಯಮೀಮಾಂಸೆಗಳಲ್ಲಿ ಹಲವು ವರುಷಗಳ ಕಾಲ ವಾದ–ವಾಗ್ವಾದ–ವಿಚಾರವಿಮರ್ಶೆ–ಚರ್ಚೆಗಳೂ ಬೆಳೆದಿವೆ. ಆದರೆ ನಾಟ್ಯವು ಕ್ರೀಡನೀಯಕ ಅಂದರೆ

ವಿನೋದಕ್ಕೆಂದು ಪ್ರಥಮತಃ ಜನಿಸಿ ನಂತರ ತನ್ನ ಕಾಂತಾಸಮ್ಮಿತ (ಸಂಗಾತಿಯಿಂದ ಬರುವ ಹಿತವಾದ ಉಪದೇಶದಂತೆ) ವಿಧಾನದಿಂದ ಜೀವಪೋಷಕವಾದ ಔಷಧಿಯನ್ನು ಸಿಹಿಗುಳಿಗೆಯಂದದಿ ನೀಡುತ್ತಾ ಬಂದಿದೆಯೆಂಬುದು ಅಲಂಕಾರಿಕವರಿಷ್ಠರೆಲ್ಲರೂ ಸ್ವೀಕರಿಸಿ ಪಾಲಿಸಿದ ಭರತಮತ.

*ನ ತಜ್ಜ್ಞಾನಂ ನ ತಚ್ಛಿಲ್ಪಂ ನ ಸಾ ವಿದ್ಯಾ ನ ಸಾ ಕಲಾ*
*ನ ಸ ಯೋಗೋ ನ ತತ್ ಕರ್ಮ ನಾಟ್ಯೇಸ್ಮಿನ್ ಯನ್ನ ದೃಶ್ಯತೇ*
*ಸರ್ವಶಾಸ್ತ್ರಾಣಿ ಶಿಲ್ಪಾನಿ ಕರ್ಮಾಣಿವಿವಿಧಾನಿ ಚ*
*ಅಸ್ಮಿನ್ನಾಟ್ಯೇ ಸಮೇತಾನಿ ತಸ್ಮಾದೇತನ್ಮಯಾ ಕೃತಮ್*
*ತನ್ನಾತ್ರ ಮನ್ಯುಃ ಕರ್ತವ್ಯೋ ಭವಾದ್ಭಿರಮರಾನ್ ಪ್ರತಿ*
*ಸಪ್ತದ್ವೀಪಾನುಕರಣಂ ನಾಟ್ಯೇ ಹ್ಯಸ್ಮಿತ್ ಪ್ರತಿಷ್ಠಿತಮ್*

**ನಾಟ್ಯದಲ್ಲಿರದ ಯಾವುದೇ ಜ್ಞಾನ, ಯಾವುದೇ ಶಿಲ್ಪ, ಯಾವುದೇ ವಿದ್ಯೆ, ಯಾವುದೇ ಕಲೆ, ಯಾವುದೇ ಯೋಗ, ಯಾವುದೇ ಕರ್ಮ ಈ ಜಗತ್ತಿನಲ್ಲಿಲ್ಲ. ಆದ್ದರಿಂದ ಸರ್ವಶಾಸ್ತ್ರ, ಶಿಲ್ಪ, ಕರ್ಮ, ಜ್ಞಾನಗಳೆಲ್ಲವೂ ನಾಟ್ಯದಲ್ಲೇ ಇದ್ದು; ಇದು ನನ್ನದೇ ಸೃಷ್ಟಿಯಾಗಿದೆ. ಆದ್ದರಿಂದ ದೇವತೆಗಳ ಕುರಿತು ವೃಥಾ ಕೋಪವನ್ನು ತಾಳದಿರಿ. ಸಪ್ತದ್ವೀಪದ ಅನುಕರಣವೇ ಈ ನಾಟ್ಯದಲ್ಲಿದೆ.** ಅಂದರೆ ಕಾವ್ಯ-ಕಲಾವಿಶ್ವವಿಶೇಷವೆಲ್ಲವೂ ನಾಟ್ಯವೇದದೊಳಗಿದೆ. ಲೋಕಾನುಕರಣದ ಪ್ರತಿಬಿಂಬ ನಾಟ್ಯವೇದವಾಗಿದ್ದು, ಯಾವುದೇ ವೈಯಕ್ತಿಕ ನಡೆನುಡಿಯ ಅಪಹಾಸ್ಯದ ಅನುಕರಣವಿಲ್ಲಿಲ್ಲ. ಬದಲಾಗಿ ಅವಸ್ಥೆಗಳ ಅನುಕೀರ್ತನವಿದು. ಇಲ್ಲಿರುವುದು ಜಂಭದ ಮಾತಲ್ಲ. ಬದಲಾಗಿ ಪರಿಪೂರ್ಣದೃಷ್ಟಿಯ ಪರಿಪಕ್ವ ಪರಿಪಾಕದ ಸಮಗ್ರಸಂದೇಶ. ಇದನ್ನೇ ಮುಂದಿನ ಶ್ಲೋಕ ವಿವರವಾಗಿ ಹೇಳಿದೆ.

*ವೇದವಿದ್ಯೇತಿಹಾಸಾನಾಮಾಖ್ಯಾನಪರಿಕಲ್ಪನಮ್*
*ಶ್ರುತಿಸ್ಮೃತಿಸದಾಚಾರಪರಿಶೇಷಾರ್ಥಕಲ್ಪನಮ್*
*ವಿನೋದಜನನಂ ಲೋಕೇ ನಾಟ್ಯಮೇತದ್ ಭವಿಷ್ಯತಿ*
*ದೇವತಾನಾಮಸುರಾಣಾಂ ರಾಜ್ಞಾಮಥ ಕುಟುಂಬಿನಾಂ*
*ಕೃತಾನುಕರಣಮ್ ಲೋಕೇ ನಾಟ್ಯಮಿತ್ಯಭಿಧೀಯತೇ*
*ಯೋಯಂ ಸ್ವಭಾವೋ ಲೋಕಸ್ಯ ಸುಖದುಃಖಸಮನ್ವಿತಃ*

**ವೇದವಿದ್ಯೆ, ಇತಿಹಾಸ, ಆಖ್ಯಾನ, ಪರಿಕಲ್ಪನೆ, ಶ್ರುತಿ, ಸ್ಮೃತಿ, ಸದಾಚಾರ ಮತ್ತು ಆನಂದ ನೀಡಬಲ್ಲ ಉಳಿದ ಅರ್ಥಕಲ್ಪನೆಗಳೆಲ್ಲವೂ ನಾಟ್ಯದಲ್ಲಿದೆ. ಲೋಕಕ್ಕೇ ವಿನೋದವನ್ನು ನೀಡುವ ನಾಟ್ಯದಲ್ಲಿ ದೇವತೆಗಳ, ಅಸುರರ, ರಾಜರ, ಕುಟುಂಬಿಗಳ ನಡೆನುಡಿಗಳ ಅನುಕರಣವೆಲ್ಲವೂ ಇದೆ. ಸುಖ ದುಃಖಗಳ ಮಿಶ್ರಣದಿಂದ ಕೂಡಿದ ಮಾನವರ ಸ್ವಭಾವವನ್ನು ಆಂಗಿಕಾದಿ ಅಭಿನಯಗಳಿಂದ ಪ್ರದರ್ಶಿಸುವುದೇ ನಾಟ್ಯ.**

## ಇಂದ್ರಧ್ವಜಮಹೋತ್ಸವದಲ್ಲಿ ನಾಟ್ಯಪ್ರಯೋಗ

**(ತ್ರಿಶ್ರಏಕ) ಭರತನು ಬ್ರಹ್ಮನಿಗೆ :–** ಆಜ್ಞೆಯಾಗಲೀ ವಿಧಾತ ವೇದವಿದನು ಸಲಿಸುವೆ
ಸ್ವಾತಿ ನಾರದರ ಕೂಟ ನೇತ್ರಯಜ್ಞ-ಇಡಿಸುವೆ

**ಬ್ರಹ್ಮ :–** ಇಂದ್ರಜಯವಿಲಾಸವಿದುವೆ ಮೆರೆವ ಧ್ವಜಮಹೋತ್ಸವಾ
ಮಲೆತ ಮತ್ತ ದನುಜರನ್ನು ನುಲಿದ ನುರಿದ ಉತ್ಸವಾ

**ಭರತ:–** ಯುಕ್ತಸಮಯವಿದು ವಿರಿಂಚಿ ಅದನುಕರಿಸಿ ತೋರ್ಪುದೇ?
ಇವರಿಗಪ್ಪ ನಾಂದಿ ಅಷ್ಟಾಂಗಪದ ವಿನ್ಯಾಸದೇ...

**(ಇಂದ್ರವಿಜಯ ಕುರಿತ ಅಭಿನಯ ಅಥವಾ ನಾಟ್ಯಪ್ರಯೋಗದ ಪರಿಕಲ್ಪನೆಯನ್ನು ಮಾಡುವುದು)**

**(ದೈತ್ಯನಾಶಕ್ಕೆ ಉದ್ಯುಕ್ತನಾಗುವ ಇಂದ್ರನ ವರ್ತನೆಗೆ ಅನುಕೂಲವಾಗಿ ಉದ್ಧತ ಜತಿ ಅಥವಾ ಉದ್ಧತ ರೂಪದ ನುಡಿಸಾಣಿಕೆ ಅಥವಾ ಸ್ವರಕಲ್ಪನೆ ಮಾಡಬಹುದು. ಅದನ್ನು ಮೆಚ್ಚಿದ ಇಂದ್ರಾದಿಗಳು ಬಹುಮಾನವನ್ನು ಭರತನಿಗಿತ್ತರು.)**

**(ಮಿಶ್ರ–ದ್ರುತ)** ಪಾರಿತೋಷಕ ಪ್ರಾಪ್ತವಾಯಿತು ರಂಗದಾ ಅನುಕೂಲಕೆ
ಇಂದ್ರ ಧ್ವಜವನು ಇತ್ತನು...
ಬ್ರಹ್ಮ ಕಾಷ್ಠವ ಕೊಟ್ಟನು..
ವರುಣ ಕಮಂಡಲವಿತ್ತನು..
ಸೂರ್ಯ ಛತ್ರವ ತಂದನು...
ವಾಯು ಚಾಮರ ಬೀಸಿದ..
ಆಸನವ ಹರಿ ಹರಹಿದ...
ಕುಬೇರ ಮುಕುಟವ ಮಂಡಿಸೇ...
ಶಿವನು ಸಿದ್ಧಿ ಪ್ರಸಾದಿಸೇ...
ಯಕ್ಷಪನ್ನಗ ದೇವರೂ...ಸರಸನಾಟ್ಯದ ಪ್ರೀತರೂ
ಗುಣ–ಸ್ವಭಾವದ–ರೂಪದ...ರಸ–ಕ್ರಿಯೆಯ–ಬಲ–ಶಕ್ತಿಯ...
ಹರುಷದುಡುಗೊರೆಯಾಗಿ ಅರ್ಪಿಸೆ...ಹಿಗ್ಗು ಹೂಮಳೆ ಸುರಿಯಿತು

**(ಕ್ರುದ್ಧರಾದ ರಾಕ್ಷಸಗಣದ ಸನ್ನಿವೇಶಕ್ಕೆ ಹೊಂದುವಂತೆ ಶಬ್ದಪರಿಕಲ್ಪನೆ ಅಥವಾ ಉದ್ಧತ ಜತಿ)**
ಕುಬ್ಜವಾಯಿತು ದೈತ್ಯಗಣವು
ನೋಡಲಾರೆವು...ಸಹಿಸೆವು...
ಮಾನಹಾನಿಗೆ ಪ್ರತಿವಿಘಾತವು
ಸ್ಮೃತಿಯಸ್ತಂಭನ ವಿಘ್ನವು
ಬನ್ನಿ ಬನ್ನಿರಿ ಬನ್ನಿರೈ ।ವಿರೂಪಾಕ್ಷ ಜೊತೆಯನು ಸೇರಿರೈ

**(ಪಾಟಾಕ್ಷರ ಕಲ್ಪನೆ ಮತ್ತು ಆಲಾಪನೆ)**
**(ಚತುರಶ್ರ)** ಕೋಲಾಹಲದ ಹಾಲಾಹಲವು ಸುತ್ತಲು ಸುತ್ತಿತ್ತು
ತಿಳಿವನು ಕಳೆದು ವೈಷಮ್ಯದ ಹೊಗೆ ಹುತ್ತವ ಕಟ್ಟಿತ್ತು

**(ಉದ್ಧತ ಜತಿ– ಇಂದ್ರ ವಿಘ್ನಗಳನ್ನು ಓಡಿಸುವಾಗ ಜರ್ಜರವನ್ನು ಕುರಿತು ಸೂತ್ರಧಾರ/ಎಲ್ಲರೂ ಕೂಡಿ)**
**(ಮಿಶ್ರ)** ಜರ್ಜರ....ಅತಿ ದುರ್ಧರ
ಅಬ್ಬರದ ನಗು ಬರ್ಬರ
ವಿಘ್ನತೋಷಕೆ ಪ್ರಹಾರದಜ್ವರ
ದುಷ್ಟಪರಿವಾರಮರ್ದನದ ವರ

**(ಚತುರಶ್ರ) ಭರತ :** ನಾಟ್ಯಹಾದಿ ಹಳಿ ತಪ್ಪಿತು ದೇವಾ
ಹದಗೊಳಿಸಿ ಹಸನು ಮಾಡುವೆಯಾ?
ನೆಲೆಯಿಲ್ಲದ ಕಲೆ ಬೆಲೆಬಾಳದು ಕಳೆ
ಕೆಡುವುದು ಸೆಲೆ ಬಲೆಗಟ್ಟಿತೇ ಭಾವ

**(ಮಿಶ್ರ) ಬ್ರಹ್ಮ ವಿಶ್ವಕರ್ಮನಿಗೆ ಸೂಚಿಸುತ್ತಾ :**
ವಿಶ್ವಕರ್ಮನಿಗಿತ್ತ ಅಪ್ಪಣೆ ನಾಟ್ಯವೇಶ್ಮದ ನಿರ್ಮಿತಿ
ದೇವಶಿಲ್ಪಿಯ ದಿವ್ಯದೃಷ್ಟಿಗೆ ಮೂಡಿ ಅಚ್ಚರಿ ಆಕೃತಿ

**(ಆಲಾಪನೆ ಅಥವಾ ಗತಿವ್ಯತ್ಯಾಸದ ನುಡಿಸಾಣಿಕೆ)**
ಸ್ತಂಭ, ಅಂಬರ, ದ್ವಾರ, ಮಂಟಪ, ಹೊಸಿಲು, ಹಲಗೆಗೆ ದೇವರು
ಕಟಕಿ, ನೆಲ, ತೊಲೆ, ಮತ್ತವಾರಿಣಿ ರಂಗಪೀಠಕೆ ನಿಂತರು
ರಕ್ಷಣೆಯ ಕರ್ತವ್ಯವಪ್ಪುದೆ ಕಲೆಯ ಬಾಳನು ಬೆಳೆಸಲು
ಅರಿತು ದೃಢದಲಿ ನಿಂತು ಛಲದಲಿ ಇರಲು ಚೇತನ ಕಾಣ್ಬುದು **(ದ್ರುತಸ್ಥಾಯಿಯಲ್ಲಿ ಆಲಾಪನೆ)**

ರಂಗಮಧ್ಯದೆ ಸ್ಥಿತನು ಬ್ರಹ್ಮನು ಪುಷ್ಪಮೋಚನೆ ನಿಯತಿಯು
ತಪ್ಪಿ ನಡೆದರೆ ಜ್ಞಾನ ನಿಷ್ಫಲ, ಅಶುಭ-ಅಪಜಯ ಬಪ್ಪುದು
ರಂಗದೈವತ ಪೂಜೆ ಮಾಡಿರಿ ಹೊಂದಿ ಇಹಪರಸುಖವನು
ಪೂರ್ವರಂಗದ ವಿಧಿಯ ಭಂಗಿಸೆ ನೀಚಜನ್ಮದಿ ಜನಿಪನು
ಒಲಿದು ಬಂದರೆ ಕಲೆಯ ಸೊಗಸು ದ್ವಿ-ಗುಣವಾಗ್ವುದ ಕಾಣಿರಿ...
ಕಾಂಬ ಕಣ್ಣಲೆ ಅಂದಚೆಂದವು ಇಹುದು ನಮ್ಮನು ನಂಬಿರಿ
ಮಾತುಕತೆ ಮೊದಲಿಟ್ಟರು...ಉಭಯಕುಲಪರಶ್ರೇಷ್ಠರು...
**(ದಾನವ-ದೇವತೆಗಳ ಸಂಧಾನಕ್ಕೆ ಸ್ವರಕಲ್ಪನೆ)**
ಅನುಕರಣದಾಟದ ರೀತಿಯ ನಾಟ್ಯನಿಯತಿಯ ಬಲುಮೆಯ

**ವಿರೂಪಾಕ್ಷ:** ಅಸುರಭಂಜನ... ಸುರರರಂಜನ...**(ಪಾಟಾಕ್ಷರ ಅಥವಾ ಗತಿ ವಿನ್ಯಾಸ)**
ಸುರರ ಪರವಿದು ದೈತ್ಯದಮನಕೆ ಮೀಸಲಾದುದೆ ನಾಟ್ಯವು? **(ಜತಿ)**
ನಮಗೆ ನೆಲೆಯನು ನೀಡದಿರೆ ತಪ್ಪದು ವಿಘ್ನವು !
**(ಚತುರಶ್ರಏಕ) ಬ್ರಹ್ಮ :** ಕಾರಣವಿಲ್ಲದೆ ಕ್ರೋಧವು ತರವೇ?
ಭೀತಿ-ಘಾತಿಯ ಅವಸರ ರಸವೇ?
ಮತಿಯಿಲ್ಲದ ಗತಿ ರತಿಯಿಲ್ಲದ ಸತಿ
ಇದ್ದುದೇನು ಫಲ? ಪತಿತರ ನೆಲೆಯೇ !
ದೇವರೂ ಒಂದೇ, ದೈತ್ಯರು ಒಂದೇ
ಒಳಗಿನ ಕಣ್ಣನು ತೆರೆಯಿರಿ ಮುಂದೆ
**(ತ್ರಿಶ್ರಏಕ)** ಕರ್ಮ-ಧರ್ಮಕಿದು ಸಂಬಂಧ ।ಲೋಕ।
ಭಾವ-ಕೀರ್ತನದ ಅನುಬಂಧ
ಹಿತ ಉಪದೇಶ ಸ್ವಭಾವಬಾಂಧವ್ಯ
ರಸ-ರಂಜನ-ಆನಂದವೆ ಮೌಲ್ಯ

**ಸೂತ್ರಧಾರ/ನಿರೂಪಣೆ:** ಸಪ್ತದ್ವೀಪಗಳ ಅನುಕರಣ, ಅನುಕೀರ್ತನ ಈ ನಾಟ್ಯದಲ್ಲಿದೆ. ಅಧರ್ಮಿಗಳಿಗೆ ಧರ್ಮವನ್ನು, ಭೋಗಿಗಳಿಗೆ ನಿಗ್ರಹವನ್ನು, ಉತ್ತಮವರಿಗೆ ಶಾಂತಿಯನ್ನು, ಹೇಂಬೇಡಿಗಳಿಗೆ ಶೌರ್ಯವನ್ನು, ಮೂರ್ಖರಿಗೆ ವಿವೇಕವನ್ನು, ವಿದ್ವಾಂಸರಿಗೆ ವೈದುಷ್ಯವನ್ನು, ಉದ್ವಿಗ್ನರಿಗೆ ಸ್ಥಿರಬುದ್ಧಿಯನ್ನು, ದಣಿದವರಿಗೆ ಮನಃಸ್ವಾಸ್ಥ್ಯವನ್ನು, ದುಃಖಿತರಿಗೆ ಸ್ಥಿಮಿತವನ್ನು ಕೊಡುವುದೇ ನಾಟ್ಯ. ಧರ್ಮಕ್ಕೆ, ಯಶಸ್ಸಿಗೆ, ಆಯುಷ್ಯಕ್ಕೆ, ಬುದ್ಧಿಪ್ರಚೋದನೆಗೆ ಹಿತನೀಡುವ ನಾಟ್ಯದಲ್ಲಿ ಎಲ್ಲ ತರದ ವಿದ್ಯೆ, ಕಲೆ, ಯೋಗ, ಆಖ್ಯಾನ, ಇತಿಹಾಸಗಳೂ ಅಡಕವಾಗಿದೆ. ಇದರಲ್ಲಿ ಇಲ್ಲದ್ದು ಬೇರೆಲ್ಲಿಯೂ ಇಲ್ಲ. ಇದರಲ್ಲಿ ಇಲ್ಲದ್ದು ಬೇರೆಲ್ಲಿಯೂ ಇಲ್ಲ. ಇದರಲ್ಲಿ ಇಲ್ಲದ್ದು ಬೇರೆಲ್ಲಿಯೂ ಇಲ್ಲ...

*** ಆವರಣಚಿಹ್ನೆ( )ಯೊಳಗೆ ಬರೆಯಲಾದ ಸಂಗತಿಗಳು ಗತಿ, ತಾಳ, ಪಾಟಾಕ್ಷರ/ಸ್ವರ-ಶಬ್ದಕಲ್ಪನೆ/ಆಲಾಪನೆ/ ವಾದ್ಯಸಾಂಗತ್ಯದ ನಿರ್ದೇಶನಕ್ಕೆ ಇರುವ ಸ್ಥಾನ, ಪಾತ್ರೌಚಿತ್ಯ, ನಿರೂಪಣಾ ನೆಲೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಹೇಳಲಾಗಿದೆ. ಇದು ಕಲಾವಿದರಿಗೆ ನೃತ್ಯರೂಪಕದ ಸಂಯೋಜನೆಗೆ ಅಳವಡಿಸಿಕೊಳ್ಳುವುದಾದರೆ ಅನುಕೂಲವಾಗಲಿದೆ. ಇನ್ನು ಭಾವಾಭಿವ್ಯಕ್ತಿಗೆ ಹೊಂದುವ ರಾಗದ ಆಯ್ಕೆ, ಕಲಾವಿದರ ಸಂಖ್ಯೆ ಮತ್ತು ಆಂಗಿಕಾದಿ ಅಭಿನಯಗಳಲ್ಲಿ ಸ್ವಾತಂತ್ರ್ಯವನ್ನು ಕಲಾವಿದರಿಗೇ ಬಿಟ್ಟುಕೊಟ್ಟಿದೆ.*

**(ಮುಂದಿನ ಮಾಲಿಕೆಯಲ್ಲಿ...ಸಮವಕಾರ/ಡಿಮ/ ತಾಂಡವನೃತ್ಯ...ನಿರೀಕ್ಷಿಸಿ)**

# ರಂಗ-ಅಂತರಂಗದ ಅರಿವಿನೆಡೆಗೆ ಸಾರ್ಥಕ ಪ್ರಯತ್ನ

# ನೃತ್ಯಾಂತರಂಗ

– *'ಮನೂಬನ'*

ಈಗಿನ ದಿನಗಳಲ್ಲಿ ಭರತನಾಟ್ಯದಂತಹ ಶಾಸ್ತ್ರೀಯನೃತ್ಯ ಕಾರ್ಯಕ್ರಮವನ್ನು ಹಿಮ್ಮೇಳ–ವೇದಿಕೆ–ಬೆಳಕು–ಧ್ವನಿವರ್ಧಕ ಮುಂತಾದ ಹಲವು ಯೋಜನೆಗಳ ಸಹಿತ ನಿರ್ವಹಿಸಿ ಏರ್ಪಡಿಸುವುದೇ ಒಂದು ದೊಡ್ಡ ಸವಾಲಾಗಿ ಪರಿಣಮಿಸುತ್ತಲಿದೆ. ಹೆಚ್ಚುತ್ತಿರುವ ಹಿಮ್ಮೇಳದ ಅಗತ್ಯಗಳು, ಗುಣಮಟ್ಟದ ಹಿಮ್ಮೇಳ ಒದಗಿಸುವಲ್ಲಿ ಸಮಸ್ಯೆಗಳು ಮತ್ತು ರಂಗದ ಇತರೆ ಖರ್ಚುಗಳಿಂದಾಗಿ ಕೊನೇಪಕ್ಷ 1 ಗಂಟೆಯ ಒಂದು ಪರಿಪೂರ್ಣ ನೃತ್ಯಕಾರ್ಯಕ್ರಮವನ್ನು ಏರ್ಪಡಿಸಬೇಕೆಂದರೂ ವೆಚ್ಚ ಇಪ್ಪತ್ತು ಸಾವಿರದ ಮೇಲೆ ದಾಟುತ್ತದೆ. ಜೊತೆಗೆ ವರುಷದಿಂದ ವರುಷಕ್ಕೆ ನೃತ್ಯಾಸ್ವಾದ ಪಡೆಯುವ ಆಸಕ್ತ ಸಹೃದಯರ ಸಂಖ್ಯೆಯೂ ಕಾರಣಾಂತರಗಳಿಂದ ಕ್ಷೀಣಿಸುತ್ತಲೇ ಸಾಗಿದೆ. 'ಭರತನಾಟ್ಯ ಅರ್ಥವಾಗುವುದಿಲ್ಲ' ಎಂಬ ಸಂವಹನದ ಕೊರತೆಯೂ ಇದಕ್ಕೆ ಪ್ರಧಾನ ಕಾರಣ. ಹೀಗಿರುವಾಗ ಆಸಕ್ತ ನೃತ್ಯಾಪೇಕ್ಷಿ ಎಳೆಯ, ಕಿರಿಯ, ಅಷ್ಟೇಕೆ ಹಿರಿಯ ಕಲಾವಿದರಿಗೆ ಒಂದು ರಂಗಾಭಿವ್ಯಕ್ತಿಗೆ ಅನುಕೂಲ ಮಾಡಿಕೊಡುವುದೆಂದರೆ ಭರತಮುನಿಯೇ ನಾಟ್ಯಶಾಸ್ತ್ರದಲ್ಲಿ ಹೇಳಿದಂತೆ 'ದಾನಗಳಲ್ಲಿ ಶ್ರೇಷ್ಠವಾದುದೇ ಪ್ರೇಕ್ಷಣೀಯ ಪ್ರದಾನ'. ಅಂತಹ ಒಂದು ಮಹತ್ಕಾರ್ಯಕ್ಕೆ ಇಂಬು ಕೊಡುವಂತಹ ನಡೆ ಪುತ್ತೂರಿನ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯದ್ದು.

ಕರಾವಳಿಯ ಪಾಲಿಗೆ ವಿನೂತನವೆನಿಸುವ ಈ ಕಲ್ಪನೆಯ ರೂವಾರಿ ದಶಕಗಳಿಂದಲೂ ಅನೇಕ ಗುಣಾತ್ಮಕ, ಪರಿಣಾಮಾತ್ಮಕ ಕಲಾಸಂಘಟನೆಯಲ್ಲಿ, ಪರಿಸರ–ಸಂಸ್ಕೃತಿ ಜಾಗೃತಿಯ ಕಾರ್ಯಕ್ರಮಗಳಲ್ಲಿ ಪ್ರಧಾನ ಪಾತ್ರ ವಹಿಸಿರುವ ಅಕಾಡೆಮಿಯ ನಿರ್ದೇಶಕ, ಗುರು ವಿದ್ವಾನ್ ಬಿ.ದೀಪಕ್ ಕುಮಾರ್. ಭರತನಾಟ್ಯ–ಕಥಕ್–ಕೂಚಿಪುಡಿ ಪರಿಣತರಾಗಿರುವ ದೀಪಕ್ ಕುಮಾರರಿಗೆ ಹಲವಾರು ಹೆಸರುವಾಸಿ ಪ್ರದರ್ಶನ–ಪ್ರಶಸ್ತಿಗಳು–ಶೈಕ್ಷಣಿಕ ಮಾನ್ಯತೆ– ಹೆಸರಾಂತ ಗುರುಹಿರಿಯರ ಪೋಷಣೆಗಳು ಸಲ್ಲುತ್ತಲೇ ಬಂದಿವೆ.

ಇವರ ನೃತ್ಯಪಯಣಕ್ಕೆ ಜೊತೆಯಾಗಿದೆ ಇವರ ಇಡೀ ಕುಟುಂಬ. ಪತ್ನಿ ವಿದುಷಿ ಪ್ರೀತಿಕಲಾ ನೃತ್ಯ ಸಂಗೀತಗಳೆರಡರಲ್ಲೂ ವಿದ್ವತ್ತನ್ನು ಪಡೆದ ಪ್ರತಿಭಾವಂತೆಯಾಗಿ; ಕರಾವಳಿಯ ಪಾಲಿನ ನೃತ್ಯಕ್ಷೇತ್ರದ ಹಾಡುಗಾರಿಕೆಗೆ ಹೊಸ ಆಶಾಕಿರಣವಾಗಿ ಮೂಡಿಬರುತ್ತಲಿರುವವರು. ದೀಪಕ್ ಅವರ ಸಹೋದರ ಗಿರೀಶ್ ಕುಮಾರ್ ಸ್ವತಃ ಉತ್ತಮ ನೃತ್ಯಪಟು, ದೂರದರ್ಶನ ಕಲಾವಿದ, ನೃತ್ಯಪ್ರದರ್ಶನಗಳ ಸಂಘಟನೆ, ಆಯೋಜನೆ, ಕಲಿಸುವಿಕೆಯಲ್ಲಿ ಪಳಗಿದವರು. ತಂದೆ ಭವಾನಿಶಂಕರ್ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿದ ಯಶಸ್ವಿ ಆಯೋಜಕರು, ತಾಯಿ ಶಶಿಪ್ರಭಾ ನೃತ್ಯದ ವೇಷ ಭೂಷಣ–ಪ್ರಸಾದನಗಳನ್ನು ತಯಾರಿಕೆ, ವಿನ್ಯಾಸ ಮಾಡುವುದರಲ್ಲಿ ಎತ್ತಿದ ಕೈ. ಇದೀಗ ಇಡೀ ಕುಟುಂಬ ನೃತ್ಯದ ಅಂತರಂಗವನ್ನು ಶೋಧಿಸುವ ಕಾರ್ಯಕ್ಕೆ ಜೊತೆಗೂಡಿದ್ದಾರೆ. ಈ ಕಲಾಪರ್ಯಟನೆಗೆ ಮಂಗಳಾಮೃತ ಸಭಾಂಗಣವು ಅವಕಾಶ ಕಲ್ಪಿಸುತ್ತಾ ಬಂದಿದ್ದು; ಇದರ ನಿರ್ವಹಣೆಯಲ್ಲಿ ವಿಪಿನ್ ಅವರೂ ಉದಾರವಾಗಿ ಕೈಜೋಡಿಸುತ್ತಿದ್ದಾರೆ.

ನೃತ್ಯಾಂತರಂಗದ ತಿಂಗಳ ಪ್ರದರ್ಶನದಲ್ಲಿ ಈಗಾಗಲೇ ಹಲವು ಪ್ರತಿಭೆಗಳು ರಂಗಕ್ಕೂ, ಪ್ರೇಕ್ಷಕರ ಅಂತರಂಗಕ್ಕೂ ಪ್ರವೇಶಿಸಿಯಾಗಿದೆ. ವಿವೇಕಾನಂದ ಶಾಲೆಯಲ್ಲಿ ಏಳನೇ ತರಗತಿ ಕಲಿಯುತ್ತಿರುವ ಸಿಂಚನಾ ಕಂದೇಲು, ಒಂಭತ್ತನೇ ತರಗತಿಯ ವೈಷ್ಣವಿ ಭಟ್, ಸುದಾನ ಶಾಲೆಯ 4ನೇ ತರಗತಿ ವಿದ್ಯಾರ್ಥಿನಿ ಇಶಾ ಸುಲೋಚನಾ ಮುಳಿಯ ಅವರು ಅಧಿಕೃತವಾಗಿ ರಂಗಪ್ರವೇಶದಷ್ಟೇ ಸಲೀಸಾಗಿ ವೈಯಕ್ತಿಕವಾಗಿ ತಲಾ ಒಂದೊಂದು ಗಂಟೆಯ ನೃತ್ಯಾಭಿವ್ಯಕ್ತಿಯನ್ನು ನೀಡಿದ್ದಾರೆ. ಅದಕ್ಕೂ ಮೊದಲೇ ಹಲವು ಪ್ರೌಢ ಕಲಾವಿದರೂ ನೃತ್ಯಪ್ರದರ್ಶನ ನೀಡಿ ಜನಮನ ಮೆಚ್ಚುಗೆ ಪಡೆದಿದ್ದಾರೆ.

*'ನೃತ್ಯಾಂತರಂಗದಿಂದ ರಸಿಕ ಸಹೃದಯರ ಪ್ರಮಾಣವೂ ಗುಣಾತ್ಮಕವಾಗಿ ಹೆಚ್ಚುವುದು ಗಮನಕ್ಕೆ ಬಂದಿದೆ. ಪೋಷಕರಿಗೂ ಕೂಡಾ ನೃತ್ಯದ ಅಮೂಲಾಗ್ರ ಪರಿಚಯವಾಗಿ, ಅವರ ಮಕ್ಕಳು ಅಥವಾ ಇನ್ನಾವುದೇ ಕಲಾವಿದರು ನರ್ತಿಸುವ ಅಲರಿಪು, ಜತಿಸ್ವರ, ಶಬ್ದ, ವರ್ಣದಂತಹ ಅನೇಕ ನೃತ್ಯಬಂಧಗಳನ್ನು ಅರ್ಥೈಸಿಕೊಳ್ಳಲು ಅನುಕೂಲ ಒದಗಿದೆ. ಹಾರ್ದಿಕವಾದ ಅನೌಪಚಾರಿಕವಾದ ರಂಗಾಭಿವ್ಯಕ್ತಿಯಿಂದಾಗಿ ಮಕ್ಕಳಿಗೆ ಸಭಾಕಂಪನವೂ ಕಡಿಮೆಯಾಗುತ್ತದೆ. ಮುಂದಿನ ಹಂತಗಳಲ್ಲಿ ನೃತ್ಯಾಸಕ್ತರಿಂದ ನಿಶ್ಚಿತ ವಿಷಯಾಧಾರಿತ ಕಾರ್ಯಕ್ರಮವನ್ನು ಅಳವಡಿಸುವ ಯೋಚನೆಗಳಿವೆ.*

***– ವಿದ್ವಾನ್ ದೀಪಕ್ ಕುಮಾರ್ ಪುತ್ತೂರು***

ಅಂಗಶುದ್ಧವಾದ ಹೆಜ್ಜೆಗಾರಿಕೆ, ಕ್ಲಪ್ತವಾದ ಜತಿವಿನ್ಯಾಸಗಳು, ಒಂದು ಗಂಟೆಯನ್ನು ಸಲೀಸಾಗಿ ಸುಧಾರಿ ಸಬಲ್ಲ ಪ್ರತಿಭೆ, ದೈಹಿಕ ಕ್ಷಮತೆ, ತಮ್ಮ ನೃತ್ಯಗಳನ್ನು ತಾವೇ ವಿನ್ಯಾಸ ಮಾಡಿಕೊಳ್ಳುವಷ್ಟರ ಮಟ್ಟಿಗಿನ ಪ್ರಬುದ್ಧತೆ, ರಂಗನಿರ್ವಹಣೆಯ ಬದ್ಧತೆ, ಆಹಾರ್ಯಾಭಿನಯವನ್ನು ತಾವೇ ಸುಧಾರಿಸುವ ಜಾಣ್ಮೆ ಮತ್ತು ಅಭಿನಯದಲ್ಲಿ ವಯಸ್ಸಿಗೆ ಮೀರಿದ ಪ್ರೌಢ ಅಭಿವ್ಯಕ್ತಿಯನ್ನು ನೀಡುವುದರೊಂದಿಗೆ ನೃತ್ಯ ಪ್ರದರ್ಶನಕ್ಕೆ ಸಮಸಮವಾಗಿ ಶಾಸ್ತ್ರಾಭ್ಯಾಸವನ್ನೂ ಚೊಕ್ಕಟವಾಗಿ ಪ್ರೇಕ್ಷಕರಿಗೆ ತಲುಪಿಸುವಲ್ಲಿ ಎಳೆಯ ಕಲಾವಿದರು ಯಶಸ್ವಿಯಾಗುತ್ತಿದ್ದಾರೆ.

ಕಲೆಯನ್ನು ಆಳವಾಗಿ ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಸಮರ್ಥವಾದ ಒಂದು ಪ್ರಯತ್ನವೆನಿಸಿಕೊಂಡಿರುವುದು ನೃತ್ಯಾಂತರಂಗದ ಹೆಗ್ಗಳಿಕೆ. ಹಿಮ್ಮೇಳದ ಹೆಚ್ಚುತ್ತಿರುವ ಖರ್ಚಿನಲ್ಲಿ ಬಡ, ಮಧ್ಯಮ ನೃತ್ಯವಿದ್ಯಾರ್ಥಿಗಳು ಸುಧಾರಿಸಿಕೊಳ್ಳುವುದೇ ಕಷ್ಟವಾಗುತ್ತಿರುವಾಗ ಕಡಿಮೆ ಖರ್ಚಿನಲ್ಲಿ, ಕಡಿಮೆ ಹಿಮ್ಮೇಳದಲ್ಲಿ ಮೂಡಿಬರುವಂತೆ ಈ ನೃತ್ಯಾಂತರಂಗವನ್ನು ತಿಂಗಳಿಗೊಂದಾವರ್ತಿ ವಿನ್ಯಾಸ ಮಾಡಲಾಗಿದೆ. ಅಷ್ಟೇ ಅಲ್ಲದೆ, ಸಾಮಾನ್ಯ ಪ್ರೇಕ್ಷಕರಿಗೂ ತಲುಪುವಂತೆ ಆಯಾಯ ನೃತ್ಯ ಪ್ರದರ್ಶನದೊಂದಿಗೆ ಅದರ ಶಾಸ್ತ್ರದ ಪರಿಚಯವೂ ನಡೆಯುತ್ತಿರುವುದು ಕುತೂಹಲವನ್ನು ಅರಳಿಸುತ್ತಲಿದೆ. ಆಗ ತಾನೇ ಬೆಳೆಯುತ್ತಿರುವ ನೃತ್ಯ ಕಲಾವಿದರಿಗೆ ಉತ್ತಮ ಅವಕಾಶವನ್ನು ಕೊಡುವ ಜೊತೆಗೆ ಶಾಸ್ತ್ರೀಯ ನೃತ್ಯವನ್ನು ಜನರಿಗೆ ಅದರದ್ದೇ ಆದ ಸನ್ನಿವೇಶಗಳೊಳಗೇ ಅರ್ಥ ಮಾಡಿಸುತ್ತಾ ಪ್ರೇಕ್ಷಕರ ಅಂತರಂಗಕ್ಕೂ ಸುಲಭವಾಗಿ ಲಗ್ಗೆಯಿಡುವ ಪ್ರಯತ್ನ ಸ್ಪಷ್ಟವಾಗಿ ಒಡಮೂಡಿದೆ. ವಿದ್ಯಾರ್ಥಿಗಳಿಗೆ ಸಭೆಯನ್ನು ಸಂಭಾಳಿಸುವ ಮತ್ತು ಏಕವ್ಯಕ್ತಿ ನೃತ್ಯಪ್ರದರ್ಶನ ನೀಡುವ ಸವಾಲು, ಅಭಿವ್ಯಕ್ತಿಯ ಮರ್ಮಗಳನ್ನು ತಿಳಿಯಪಡಿಸುತ್ತಲಿದೆ.



**ಉ**ಡುಪಿಯಲ್ಲಿ ರಾಧಾಕೃಷ್ಣ ನೃತ್ಯನಿಕೇತನ ಆಯೋಜಿಸುವ ಭರತಮುನಿ ಜಯಂತ್ಯುತ್ಸವದ ರಜತ ವರುಷದ ಉದ್ಘಾಟನೆಯಲ್ಲಿ ಕಲಾಕ್ಷೇತ್ರದ ವಿಶಿಷ್ಟ ಸಾಧನೆಗೆ ಕೊಡಮಾಡುವ **'ಭರತ ಪ್ರಶಸ್ತಿ'**ಯನ್ನು ಪರ್ಯಾಯ ಕಾಣಿಯೂರು ಮಠದ ಶ್ರೀಶ್ರೀಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರು ನಾಟ್ಯಕ್ಷೇತ್ರಕ್ಕೆ ಹಲವಾರು ಕೊಡುಗೆಗಳನ್ನು ನೀಡುತ್ತಿರುವ ಸಂಪಾದಕಿ ಶ್ರೀಮತಿ **ಮನೋರಮಾ ಬಿ.ಎನ್**. ಅವರಿಗೆ ಉಡುಪಿಯ ರಾಜಾಂಗಣದಲ್ಲಿ ನವೆಂಬರ್ 30, 2014ರ ಪೂರ್ವಾಹ್ನ ಪ್ರದಾನ ಮಾಡಿದರು.

**ಕಳೆದ ಸಲದ ಸಂಚಿಕೆಯಲ್ಲಿ ಮಾಯಾರಾವ್ ಮತ್ತು ಅಡೆಯಾರ್ ಲಕ್ಷ್ಮಣ್ ಅವರ ಕುರಿತ ನುಡಿನಮನ ಅಂಜಲಿಯ ಲೇಖನಗಳಿಗೆ ಮತ್ತು ಅವರ ಬದುಕಿನ ವೈಶಿಷ್ಟ್ಯಪೂರ್ಣ ಪರಿಚಯ ಬರೆಹ–ಸಂದರ್ಶನಕ್ಕೆ ಅನೇಕ ಪ್ರಶಂಸನಾರ್ಹ ಪ್ರತಿಕ್ರಿಯೆಗಳು ಬಂದಿವೆ. ಅಗಲಿದ ಚೇತನಗಳಿಗೆ ಸದ್ಗತಿಯನ್ನು ಕೋರಿದ ಓದುಗ ಸಹೃದಯರ ಅಭಿಮಾನಕ್ಕೆ ಅನಂತ ಅಭಿವಂದನೆಗಳು.**

## ನಿಮ್ಮ ಬರಹ ನಮ್ಮ ಓದು...

ಮುಖಪುಟದಲ್ಲಿ ರೂಪದರ್ಶಿಯಾಗಿ ಮಿನುಗಿ ಸಂಚಿಕೆಯ ಕಳೆಯೇರಿಸಿದ ರೇಖಾ ಹೆಗಡೆಯವರಿಗೆ ಅಭಿನಂದನೆ. 'ದೂಪಾರತಿ ಯನು ನೋಡಬನ್ನಿ' ಎಂದು ಕರೆಕರೆದು ತೆರೆದಿಟ್ಟ ಸಂಚಿಕೆ ಹಾಸ್ಯಲೇಪನದ ಸಂಭಾಷಣೆಗಳಿಂದ ನೃತ್ಯಕಾರ್ಯಕ್ರಮದ ರೀತಿನೀತಿಯೊಂದನ್ನು ಹದವಾಗಿ ಮನಮುಟ್ಟುವಂತೆ ತೆರೆದಿಟ್ಟಿತು. ನಮ್ಮನ್ನು ನಮಗೆ ಮುಖಾಮುಖಿಯಾಗುವಷ್ಟರ ಮಟ್ಟಿಗಿನ ನೈಜತೆ ಇಷ್ಟವಾಯಿತು. ಅದೂ ಸಾಲದೆಂಬಂತೆ ಹಿರಿಯ ಜೀವಗಳ ನಡುವಿನ ಸಂಭಾಷಣಾರೂಪದ ನಿರೂಪಣೆಯು ಕವಿ ಮುದ್ದಣ–ಮನೋರಮೆಯರ ನೆನಪನ್ನೂ ತರಿಸಿತು.

ಒಟ್ಟಿನಲ್ಲಿ ನೂಪುರ ಭ್ರಮರಿಯೆಂಬ ಕಿರಿ ನಿಯತಕಾಲಿಕೆಯು ಪರಿಪೂರ್ಣವಾಗಿ ಪ್ರದರ್ಶಕ ಕಲೆಗಳ ಆಳ ಅಗಲಗಳನ್ನು ಬಿಚ್ಚಿಡುವಂತಹದ್ದು ಎಂಬುದು ಸ್ಪಷ್ಟ. ಅಂತರ್ರಾಷ್ಟ್ರೀಯ ಕಲಾವಿದೆ ಡಾ.ಮಾಯಾರಾವ್ ಅವರ ಅಪೂರ್ವವಾದ ಚಿತ್ರಗಳನ್ನು ಪ್ರಾತ್ಯಕ್ಷೀಕರಿಸಿ ನುಡಿನಮನ ನೀಡಿಕೆಯೊಂದಿಗೆ ಪ್ರಕಟಿಸಿದುದು ಯಥೋಚಿತವೂ, ಕರ್ತವ್ಯವೂ ಹೌದೆಂಬುದರ ನೆನವರಿಕೆಗಾಗಿ ಹರಿದುಬಂದಿದೆ. ಓದುಗರ ಕಣ್ಣಾಲಿಗಳೂ ತೇವಗೊಂಡಿವೆ. ಇನ್ನಷ್ಟು ಮಾಯಾದೀದಿಯರನ್ನು ಕರುಣಿಸೆಂಬ ಪ್ರಾರ್ಥನೆ ತಾಯಿ ಭಾರತಿಯಲ್ಲಿದೆ. ಸರ್ವಶಕ್ತಿಸಂಜಾತೆಗೆ ನಮೋ ನಮಃ.

ಕಲಾಜಗತ್ತು ಎಂದರೆ ಏನು? ಕಲೆ ಎಂದು ನಾವು ಯಾವುದನ್ನೆಲ್ಲಾ ಸೇರಿಸಿಕೊಳ್ಳಬಹುದು? ಎಂದು ಎಣಿಕೆ ಕಾಣುತ್ತಿದ್ದ ಹಾಗೆ ಕೆಲಸಾವಳಿಗಳನ್ನು ಮಾಡಿಸುತ್ತಿದ್ದ ಮೇಸ್ತ್ರಿಯೊಬ್ಬ ಹೆಣ್ಮಗಳ ಕೆಲಸಗಳ್ಳತನವನ್ನು ಗಮನಿಸಿ, ನಾಜೂಕಾಗಿ ಸಾವರಿಸಿ ಆಕೆಯ ಅರಿವಿಗೇ ಬಾರದಂತೆ, ತನಗೆ ಬೇಕಾದ ಹಾಗೆ ಕೆಲಸ ಮಾಡಿಸಿದ ಜಾಣತನವನ್ನು ನೋಡಿ ಇದೂ ಒಂದು ಕಲೆಯೇ ಅಲ್ಲವೇ ಎಂದು ಹೊಳೆಯಿತು. ಕೆಲಸ ಮಾಡಿಸುವುದೂ ಒಂದು ಕಲೆ.

ಕಲೆ ಎಂಬುದು ಒಂದು ಬಲೆ. ಈ ಬಲೆ ನೇಯ್ದ ಹಾಗೆ ಪಕ್ಕನೆ ಮುಗಿಯುವಂಥದ್ದಲ್ಲ. ಮನರಂಜನೆ, ಮನೋವಿಕಾಸ, ಮನಃ ಶಾಂತಿಗಾಗಿ ಇರುವ ನೃತ್ಯಾದಿ ಕಲೆಗಳಂತೆಯೇ ಮಂತ್ರವಾದ, ಅಡುಗೆ, ಪೌರೋಹಿತ್ಯವೂ ಆಯಾಯ ನೆಲೆಯಲ್ಲಿ ಈ ಬಲೆಯ ಕುಣಿಕೆಯಲ್ಲರಳುವ ಜೀವನಕಲೆಗಳು. ಜೀವನವೇ ಒಂದು ಕಲೆ ಎಂದು ಸುಮ್ಮನೆ ಹೇಳುತ್ತಾರೇನು? ಕೌಟುಂಬಿಕ ಜೀವನದಲ್ಲಿಯೂ ಸಹ ಭಿನ್ನ ಭಿನ್ನ ವ್ಯಕ್ತಿತ್ವದ ಸಂಬಂಧಗಳನ್ನು ಒಟ್ಟಾಗಿ ಒಗ್ಗಟ್ಟಾಗಿ ಸುಧಾರಿಸಿಕೊಂಡು ಬಾಂಧವ್ಯ ಕಾಪಾಡಿಕೊಂಡು ಹೋಗುವುದೂ ಕಲೆಯೇ ಸರಿ. ಕಾಡುಮೇಡು–ಬೆಟ್ಟ ಗುಡ್ಡ– ಮೃಗಪಕ್ಷಿಗಳ ಚಟುವಟಿಕೆ, ಹೂಂಕಾರ–ಓಂಕಾರನಾದಗಳೂ ಪ್ರಕೃತಿದತ್ತವಾದ ದೈವಸೃಷ್ಟಿಯ ಒಂದು ಕಲೆಯೇ ಹೌದು. ಈ ಬಲೆಯ ಗಾತ್ರ ಎಣಿಸಿದಷ್ಟೂ ಏರುತ್ತಲೇ ಹೋಗುತ್ತದೆ. ಏನೇ ಇರಲಿ, ಸೃಷ್ಟಿ ವೈಚಿತ್ರ್ಯವೆಲ್ಲವೂ ಕಲೆಯೇ ಸರಿ. ನೀ ಮಾಯೆಯೋ, ನಿನ್ನೊಳು ಮಾಯೆಯೋ ಎಂಬ ಆರ್ಯೋಕ್ತಿ ಅಕ್ಷರಶ ಸತ್ಯ.

***ಅಜ್ಞಾನ ಆಲಸ್ಯವೆಲ್ಲವನು ಬದಿಗಿರಿಸಿ ಸುಜ್ಞಾನ ದೀವಟಿಗೆ ಹಿಡಿದುಬಿಡು ಕಂದಾ***
***ವಿಜ್ಞಾನ ವೇದಿಕೆಲಿ ಇಹುದು ಇವುಗಳಿಗೆಲ್ಲ ಬಹುಜ್ಞಾನ ವರ್ಧನೆಯ ಗುಳಿಗೆ ಮಕರಂದಾ***

***– ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ,***
ಶ್ರೀಗೋಪಾಲಕೃಷ್ಣ ಯಕ್ಷಗಾನ ಕಲಾಸಂಘ, ಕಾಸರಗೋಡು.

# ಶ್ರೀರಾಮಾಯಣ ಮಹಾಭಾರತದಲ್ಲಿ ಪಿತಾಪುತ್ರ ಸಂಬಂಧ

*– ಕೀರ್ತಿಶೇಷ ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯ*

**ಯಕ್ಷಗಾನ ಅರ್ಥಧಾರಿ, ಕಲಾವಿದ, ಪ್ರಸಂಗಕರ್ತ, ಸಾಹಿತಿ, ವಿಮರ್ಶಕ, ಶಿಕ್ಷಕ, ವೇದ ವ್ಯಾಖ್ಯಾನಕಾರ, ದ್ವಿವೇದಿ, ವಿದ್ವಾಂಸ, ಗುರು...ಹೀಗೆ ನಾಮವಿಶೇಷಣಗಳಿಗೆ ಅನ್ವರ್ಥ ಅಭಿದಾನಪ್ರಾಯರಾದ ಕೀರ್ತಿಶೇಷ ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯರ ಬರೆವಣಿಗೆಯಲ್ಲರಳಿದ ಈ ಅಧ್ಯಯನಪೂರ್ಣ ಲೇಖನವು ಕಳೆದೊಂದು ವರುಷದಿಂದ ಪ್ರಕಟವಾಗುತ್ತಿದ್ದು ಇಂದು ಸಮಾಪನಗೊಳ್ಳುತ್ತಲಿದೆ. ಕಲಾವಿದರಿಗೆ ಅಂತಃಸ್ಫುರಣೆಯಾಗಬಲ್ಲ ಸನಾತನ ಮೌಲ್ಯ ಪರಂಪರೆಯ ಕಥೆ–ವಾಚಿಕ–ಅರ್ಥವ್ಯುತ್ಪತ್ತಿ–ಅಭಿನಯಾಂಶಗಳ ಗರಿಷ್ಠ ಸಾಧ್ಯತೆಯನ್ನಿತ್ತ ಈ ಅಂಕಣಲೇಖನದ ಪ್ರಯೋಜನವನ್ನು ತಾವು ಪಡೆದುಕೊಳ್ಳುತ್ತೀರೆಂಬ ನಂಬುಗೆ ನಮ್ಮದು. ಮುಂದಿನ ಸಂಚಿಕೆಯಲ್ಲಿ ಹೊಸ ಅಂಕಣದೊಂದಿಗೆ ಭೇಟಿಯಾಗೋಣ.**

ಜರತ್ಕಾರುವೆಂಬ ಸಾಯಾಗೃಹಮುನಿ (ಎಲ್ಲಿ ಕತ್ತಲಾಗುತ್ತದೋ ಅಲ್ಲಿ ಉಳಿದುಕೊಳ್ಳುವವ) ಮಹಾತಪಸ್ವಿಯು ತನ್ನ ಪಿತೃಗಳ ಆಶಯಕ್ಕೆ ಮಣಿದು ತನ್ನದೇ ಹೆಸರನ್ನುಳ್ಳ ಜರತ್ಕಾರು ಎಂಬ ವಾಸುಕಿ ಎಂಬ ನಾಗಮುಖ್ಯನ ತಂಗಿಯನ್ನು ಕೆಲವು ನಿಬಂಧನೆಗೊಳಪಟ್ಟು ಮದುವೆಯಾಗುತ್ತಾನೆ. ಪತ್ನಿಯನ್ನು ತ್ಯಜಿಸಿ ತೆರಳುವ ವೇಳೆ ಆಕೆಗೆ ಪುತ್ರಪ್ರಾಪ್ತಿಯ ವರವನ್ನು ಅನುಗ್ರಹಿಸುತ್ತಾನೆ. ಈತ ಪುತ್ರನನ್ನು ಪಡೆದದ್ದು ಪಿತೃಗಳಿಗಾಗಿಯೇ ಹೊರತು ತನ್ನ ಸಂತಾನದ ಬಗೆಗೆ ಯಾವುದೇ ವಾತ್ಸಲ್ಯವಿರುವುದಿಲ್ಲ ಎಂದು ಮಹಾಭಾರತದ ಆದಿಪರ್ವ ತಿಳಿಸುತ್ತದೆ.

## ಲೋಕಭ್ರಮರಿ

ರಾಜಾಪರೀಕ್ಷಿತನು ಧ್ಯಾನಮಗ್ನನಾಗಿದ್ದ ಶಮೀಕಮಹರ್ಷಿಯ ಕೊರಳಿಗೆ ಸತ್ತುಬಿದ್ದ ಹಾವನ್ನು ಹಾಕಿದ್ದರ ಸಮಾಚಾರ ತಿಳಿದ ತಕ್ಷಣವೇ ಮಹರ್ಷಿಯ ಮಗ ಶೃಂಗಿಯು ತಂದೆಯ ಮೇಲಿನ ಅತಿಶಯವಾದ ಪ್ರೀತ್ಯಾದರಾಭಿಮಾನಗಳಿಂದ ಸಿಟ್ಟಿಗೆದ್ದು ಪರೀಕ್ಷಿತ ರಾಜನ ಸಾವನ್ನು ಹೇಳುವ ಶಾಪ ಕೊಡುತ್ತಾನೆ. ಆಗ ಧರ್ಮೈಕದೃಷ್ಟಿಯುಳ್ಳ ಜ್ಞಾನಿಯಾದ ಶಮೀಕನು ಇದನ್ನು ಮೆಚ್ಚಿಕೊಳ್ಳದೆ ಹೀಗೆ ಹೇಳುತ್ತಾನೆ–

***ಪಿತಾಪುತ್ರೋವಯಸ್ಥೋಽಪಿ ಸತತಂವಾಚ್ಯ ಏವತು । ಯಥಾಸ್ಯಾದ್ಗುಣಸಂಯುಕ್ತಃ ಪ್ರಾಪ್ನುಯಾಚ್ಚಮಹದ್ಯಶಃ***

ಮಗನು ವಯಸ್ಕನಾಗಿದ್ದರೂ, ಪ್ರಬುದ್ಧನೂ, ವಿದ್ವಾಂಸನೂ ಆಗಿದ್ದರೂ ಆತನು ಗುಣವಂತನೂ, ಯಶೋವಂತನೂ ಆಗುವಂತೆ ಮಗನಿಗೆ ಬುದ್ಧಿ ಹೇಳಬೇಕು. ಮಗನು ಸರ್ವಜ್ಞನೇ ಆಗಿದ್ದರೂ ತಂದೆಯ ಮಾತನ್ನು ವಿನಯದಿಂದ ಕೇಳಬೇಕೆಂದು ಬುದ್ಧಿಹೇಳಿ ನೀನು ಧರ್ಮಾತ್ಮನಾದ ರಾಜನನ್ನು ಶಪಿಸಿದ್ದು ಸರಿಯಲ್ಲವೆಂದು ತಿಳುಹಿ ಶಿಷ್ಯರ ಮೂಲಕ ಶೃಂಗಿಯ ಶಾಪವನ್ನು ಅರಸನಿಗೆ ಹೇಳಿಕಳುಹಿಸುತ್ತಾನೆ.

ಯಯಾತಿ ಶುಕ್ರರಿಂದ ಶಪಿತನಾಗಿ ಅವರ ಕಾಲಿಗೆ ಬಿದ್ದು ಕಣ್ಣೀರಿಟ್ಟ, ವಾರ್ಧಕ್ಯ ಯೌವನಗಳನ್ನು ಮಕ್ಕಳಿಂದ ವಿನಿಮಯ ಮಾಡಿಕೊಳ್ಳುವ ಅನುಕೂಲ್ಯ ಪಡೆದ. ಆದರೆ ಪುರುವನ್ನು ಬಿಟ್ಟು ಬೇರಾರೂ ತಾರುಣ್ಯವನ್ನಿತ್ತು ಮುಪ್ಪನ್ನು ಪರಿಗ್ರಹಿಸುವುದಕ್ಕೆ ಮುಂದಾಗಲಿಲ್ಲ. ಇದರಿಂದ ಕ್ರುದ್ಧನಾಗಿ ಯದು–ತುರ್ವಸು–ಅನು–ದ್ರುಹ್ಯುಗಳಿಗೆ ಶಾಪವಿತ್ತ. ಪುರುವಿನಿಂದ ತಾರುಣ್ಯ ಪಡೆದು ಮುಪ್ಪನ್ನಿತ್ತ. ಆತನ ಮೇಲೆ ಪ್ರಸನ್ನನಾಗಿ ವರಗಳನ್ನಿತ್ತ. ಪುರು ಒಬ್ಬನೇ ಸಾಮ್ರಾಜ್ಯಾಧಿಕಾರಿಯಾದರೆ, ಉಳಿದ ಸೋದರರು ಅಲೆಮಾರಿಗಳಾಗಿ ರಾಜ್ಯಭ್ರಷ್ಟರಾಗಿಹೋದರು. ವಸ್ತುತಃ ಯಯಾತಿಯು ತನ್ನ ಮಗನ ತಾರುಣ್ಯದಿಂದ ಶರ್ಮಿಷ್ಠೆಯನ್ನೂ, ದೇವಯಾನಿಯನ್ನೂ ಉಪಭೋಗಿಸುತ್ತಾನೆ. ಅರ್ಥಾತ್ ಶರ್ಮಿಷ್ಠೆ ತನ್ನ ಮಗನ ತಾರುಣ್ಯವನ್ನು ಅನುಭವಿಸುತ್ತಾಳೆ. ದೇವಯಾನಿಯೂ ಹಾಗೆಯೇ. ಒಟ್ಟಿನಲ್ಲಿ ಇದೊಂದು ಬಗೆಯ ವಿಚಿತ್ರಸಂಬಂಧವಾಗಿ ಏರ್ಪಡುತ್ತದೆ. ವಿಶ್ವಾಮಿತ್ರ ಶಕುಂತಲೆಯರು ಶಿಶು ಶಕುಂತಲೆಯನ್ನು ಮೈಯ ಬಟ್ಟೆ ಕಳಚಿಕೊಳ್ಳುವಷ್ಟು ಹಗುರಾಗಿ ಕಾಡಿನಲ್ಲಿ ಬಿಟ್ಟುಹೋಗುತ್ತಾರೆ. ಕಣ್ವರು ವಾತ್ಸಲ್ಯದಿಂದ ಸಾಕುತ್ತಾರೆ. ಬೇಟೆಗೆ ಬಂದ ದುಷ್ಯಂತನೊಂದಿಗೆ ಕಣ್ವರ ಅನುಪಸ್ಥಿತಿಯಲ್ಲಿ ಗಾಂಧರ್ವವಿವಾಹವಾಗುತ್ತದೆ. ಪಟ್ಟಣಕ್ಕೆ ಶೀಘ್ರದಲ್ಲೇ ಕರೆಸಿಕೊಳ್ಳುವುದಾಗಿ ಹೇಳಿಹೋದ ದೊರೆ ಮತ್ತೆ ಬರುವುದೇ ಇಲ್ಲ. ದುಷ್ಯಂತ ಶಕುಂತಲೆಯರ ವಿವಾಹವನ್ನು ಕಣ್ವರು ಆಕ್ಷೇಪಿಸುವುದಿಲ್ಲ.

ಶಕುಂತಲೆ ಗರ್ಭವತಿಯಾಗಿ ಸರ್ವದಮನನನ್ನು ಹೆರುತ್ತಾಳೆ. ವೀರ ಪರಾಕ್ರಮಶಾಲಿಯಾದ ಆತನಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಕಣ್ವರೇ ಮಾಡಿಸುತ್ತಾರೆ. ಬಹುಕಾಲ ತಂದೆಯ ಮನೆಯಲ್ಲಿ ಮದುವೆಯಾದ ಮಗಳು ಇರಬಾರದೆಂದು ಮಗನೊಂದಿಗೆ ದುಷ್ಯನ್ತನೆಡೆಗೆ ಕರೆದೊಯ್ದು ಬಿಟ್ಟುಬರಲು ಮುನಿಕುಮಾರರಿಗೆ ಹೇಳುತ್ತಾರೆ. ಇತ್ತ ಅಪ್ಪನಿಂದ ಬೀಳ್ಕೊಂಡು ಬಂದ ಶಕುಂತಲೆಗೆ ದುಷ್ಯನ್ತನಿಗೆ ಸರ್ವದಮನನನ್ನು ತೋರಿಸಿ 'ಇವನು ನಿನ್ನ ಮಗ. ಯುವರಾಜನಾಗಿ ಪರಿಗ್ರಹಿಸು' ಎಂದು ಹೇಳಿದರೂ ತಿರಸ್ಕಾರದ ನುಡಿಗಳನ್ನು ಕೇಳಬೇಕಾಗುತ್ತದೆ. ಶಕುಂತಲೆ ಎಷ್ಟೇ ವಾದಿಸಿ, ನೆನಪಿಸಿ, ಗುರುತು ಹೇಳಿದರೂ ದುಷ್ಯನ್ತ **'ನಪುತ್ರಮಭಿಜಾನಾಮಿತ್ವಯಿಜಾತಂಶಕುಂತಲೇ'** ಎಂದು ಹೇಳಿ ಸರ್ವದಮನ ತನ್ನ ಮಗನಲ್ಲವೆಂದು ಮುಖ ತಿರುಗಿಸುತ್ತಾನೆ. ಆದರೆ ಅಶರೀರವಾಣಿಯೊಂದು ***ಭರ್ತವ್ಯೋಯಂ ತ್ವಯಾಯಸ್ಮಾದಸ್ಮೇಕಂ ವಚನಾದಪಿ । ತಸ್ಮಾದ್ಭವತ್ವಯಾಂ ನಾಮ್ನಾ ಭರತೋನಾಮತೇನುತಃ*** (ಆದಿಪರ್ವ, ಅಧ್ಯಾಯ 74) – ಈತ ನಿನ್ನ ಮಗ. ಈತನನ್ನು ಭರಿಸು ಎಂದ ಬಳಿಕವಷ್ಟೇ ಮಗನನ್ನೂ ಮಡದಿಯನ್ನು ಪರಿಗ್ರಹಿಸಿದ. ಅಂತಃಪುರದ ಒಳಗೆ ಬಂದ ಶಕುಂತಲೆಯಲ್ಲಿ ದುಷ್ಯಂತ ಹೀಗೆ ಹೇಳುತ್ತಾನೆ.

***ಕೃತೋಲೋಕ ಪರೋಕ್ಷೋಯಂ ಸಂಬಂಧೋವೈತ್ವಯಾನಹ***<br>***ತಸ್ಮಾದೇತನ್ಮಯಾ ದೇವಿ ತ್ವಚ್ಛುದ್ಧ್ಯರ್ಥಂ ವಿಚಾರಿತಂ –***

ನನ್ನ ನಿನ್ನ ಸಂಬಂಧ ಪ್ರಜೆಗಳ ಎದುರಿಗೆ ನಡೆಯದಿದ್ದುದರಿಂದ ನಾನು ಒಪ್ಪಿದರೂ ಪ್ರಜೆಗಳು ನಿನ್ನ ಮಗನನ್ನು ಯುವರಾಜನೆಂದು ಒಪ್ಪಬೇಡವೇ? ಯಾವಳೋ ಪುತ್ರವತಿಯಾದ ಹೆಣ್ಣನ್ನು ದೊರೆ ಸ್ವೀಕರಿಸಿದನೆಂಬ ಅಪವಾದ ಬರಕೂಡದು. ನಿನ್ನ ಚಾರಿತ್ರ್ಯಶುದ್ಧಿಯ ಸಂಸ್ಥಾಪನೆಗಾಗಿಯೇ ನಾನು ಮರೆವಿನ ನಾಟಕ ಮಾಡಿದೆ ಎನ್ನುತ್ತಾನೆ. ವಸ್ತುತಃ ಈ ಪ್ರಕರಣವನ್ನು ದುಷ್ಯಂತನ ಪರವಾಗಿ ಸಮರ್ಥಿಸುವುದಕ್ಕಾಗದು. ಅದಕ್ಕಾಗಿಯೇ ಕಾಲಿದಾಸ ಉಂಗುರ ಕಳೆದುಹೋಗುವುದು ಮತ್ತು ದೂರ್ವಾಸರ ಶಾಪ ಮುಂತಾದ್ದನ್ನು ಆರೋಪಿಸಿ ಕಥನವನ್ನು ರಸಮಯವಾಗಿ ಮಾಡುವುದರೊಂದಿಗೆ ಲೋಪ ಸರಿ ಮಾಡುವ ಪ್ರಯತ್ನವನ್ನು ಸ್ತುತ್ಯರ್ಹವಾಗಿಯೇ ಮಾಡಿದ್ದಾನೆ. ಒಟ್ಟಿನಲ್ಲಿ ಈ ಪ್ರಕರಣದಲ್ಲಿ ಪಿತಾಪುತ್ರ ಸಂಬಂಧಕ್ಕೆ ಸಾಮಾಜಿಕರ ಅಧಿಕೃತ ಮುದ್ರೆ ಬೀಳಬೇಕಾದದು ಅತ್ಯವಶ್ಯವೆಂಬುದನ್ನು ಗಮನಿಸಬಹುದು.

ತನ್ನ ಕಾರ್ಯವನ್ನು ಪ್ರಶ್ನಿಸಿದಂದು; ತನ್ನ ಇಷ್ಟಕ್ಕೆ ವಿರೋಧವಾಗಿ ವರ್ತಿಸಿದಂದು ನಾನು ನಿನ್ನನ್ನು ಬಿಟ್ಟುಹೋಗುತ್ತೇನೆಂಬ ನಿಬಂಧನೆಯೊಂದಿಗೆ ಶಾಂತನುಚಕ್ರವರ್ತಿಯ ಮಡದಿಯಾಗಿ ಬಂದ ಗಂಗಾದೇವಿ ತಾನು ಹೆತ್ತ ಏಳೂ ಮಕ್ಕಳ ಕತ್ತು ಹಿಸುಕಿ ಗಂಗಾನದಿಗೆ ಎಸೆದಾವಾಗಲೂ ಎಲ್ಲಿ ತಾನು ಪ್ರತಿಭಟಿಸಿದರೆ ಗಂಗೆ ತನ್ನನ್ನು ಬಿಟ್ಟುಹೊರಟಾಳು ಎಂಬ ಭಯದಿಂದ ಪ್ರತೀಬಾರಿ ಸಂತಾನಲತೆಯ ಕುಡಿ ಚಿವುಟುತ್ತಿದ್ದಾಗಲೂ ನಾಲಗೆ ಬಿದ್ದವರಂತೆ ನೀರವವಾಗಿ ನಿಲ್ಲುತ್ತಾನೆ ಶಾಂತನು. ಎಂಟನೇ ಬಾರಿಗೂ ಪುನರಾವರ್ತನೆಯಾದಾಗ ತಾಳ್ಮೆಗೆಟ್ಟು ಕಟುವಾಗಿ ಏಕೆ ಹೀಗೆ ಶಿಶುಹತ್ಯೆ ಮಾಡುತ್ತಿದ್ದೀ? ನಿನಗೆ ಪುತ್ರಹತ್ಯಾ ಪಾತಕವು ಬಂತು. ಈ ಬಾರಿ ಖಂಡಿತಾ ಮಗುವನ್ನು ಕೊಲ್ಲಲು ಬಿಡಲಾರೆ. ಈ ಮಗುವನ್ನಾದರೂ ಕೊಲ್ಲದೇ ಉಳಿಸು ಎಂದು ಗೋಗರೆಯುತ್ತಾನೆ.

**ಮಾವಧೀಃ ಕಸ್ಯ ಕಾಸೀತಿ ಕಿಂಹಿನತ್ಸಿ ಸುತಾನಿತಿ । ಪುತ್ರಘ್ನೀ ಸುಮಹತ್ಪಾಪಂ ಸಂಪ್ರಾಪ್ತಂ ತೇನುಗರ್ಹಿತಮ್**

ಆಗ ತಾನು ಗಂಗೆಯೆಂದು; ತನಗೆ ಜನಿಸಿದ ಮಕ್ಕಳೆಲ್ಲಾ ವಸುಗಳೆಂದು; ತನ್ನ ಹಾಗು ವಸುಗಳ ಶಾಪನಿವಾರಣೆಯಾಯಿತೆಂದು; ಗಂಗಾದತ್ತನಾದ ಈ ಶಿಶುವನ್ನು ತಾನು ಕರೆದುಕೊಂಡು ತೆರಳಿ ಯೋಗ್ಯಶಿಕ್ಷಣ ಕೊಡಿಸಿ ಪ್ರಬುದ್ಧನಾದ ಬಳಿಕ ತಂದೊಪ್ಪಿಸುವೆನೆಂದು ಆಶ್ವಾಸನೆಯಿತ್ತು ಅಂತರ್ಧಾನಳಾಗುತ್ತಾಳೆ. ತಾಯ್ತನದ ಹೊಣೆಯನ್ನು, ವಾತ್ಸಲ್ಯಸುಧೆಯನ್ನು ನೀಡುವ ಜವಾಬ್ದಾರಿಯನ್ನು ಪೂರ್ಣವಾಗಿ ನಿರ್ವಹಿಸಿದ ರೀತಿ ತಾಯಿಮಕ್ಕಳ ಸಂಬಂಧದ ಸಾಂದ್ರತೆಯನ್ನು ತಿಳುಹುತ್ತದೆ. ಇದೇ ಮಗನಿಂದಲೇ ಶಾಂತನು ಸತ್ಯವತಿಯನ್ನು ಮೋಹಿಸಿ ವರಿಸುವ ಇಚ್ಛೆ ಪೂರ್ಣಗೊಳ್ಳುತ್ತದೆ. ದೇವವ್ರತನ ತ್ಯಾಗ ಮತ್ತು ಭೀಷಣ ಪ್ರತಿಜ್ಞೆಗೆ ತಂದೆಯಿಂದ ಇಚ್ಛಾಮರಣದ ವರವೂ ದೊರಕುತ್ತದೆ. ನಂತರದ ಮಹಾಭಾರತದ ಕಥೆಗಳಲ್ಲಿ ಪಿತನು ಪುತ್ರರಿಗೆ ತಿಳಿಹೇಳದೆ ಸರಿದಾರಿಯಲ್ಲಿ ತಿದ್ದದೆ ಪುತ್ರಪ್ರೇಮಾಂಧನಾಗಿ ಹೋದುದರ ಫಲವನ್ನು ಧೃತರಾಷ್ಟ್ರನು ಜೀವಿತದ ಕೊನೆಯವರೆಗೂ ಅನುಭವಿಸುವಂತಾಗುತ್ತದೆ.

**(ಮುಗಿಯಿತು)**

# Guidelines for submitting the Dance Research Articles

Noopura Bhramari (R.), Karnataka - one of the premier institutions of research and publication in India, proposes to address a long felt, un-spelt academic need. This is devoted exclusively to the promotion of publication, advanced research and scholarship on Dance and allied arts as well as to developing requisite resources in Art for research in all the areas of human endeavor including the sciences.

The long felt lacuna in the dance research arena has been about its holistic integrated approach in encompassing all its allied forms (beyond the performing arts as well) including literature, music, theatre, sculpture, painting, art history etc. This missing link is hoped and strived to be re-established through Noopura Bhramari. Thus organisation is planned to publish research articles, reflecting on in depth studies, methodological research, openings and opportunities in the field of dance and its traditions. For that purpose Noopura Bhramari magazine got a new face as a Journal with prestigious ISSN publication no. which is compulsory need for any research paper publication.

Herewith we are happy and honored to announce and welcome the Qualitative Research articles on any theme of Dance and allied art forms which contributes to the field. It is a call for those desirous research scholars/ students (Ph.D., M.Phil., MA) Gurus/artistes/authors/students/professionals who wish to publish their research articles on new ideas/initiatives/findings. It is a small contribution to the needy research community towards developing a fertile field for the future as well.

### Rules and regulations

1. Specialization in subject is needed through thorough research. All articles are subject to review by the designated referees. If the research paper is presented/ published in any other ways, such papers will be withheld from publishing.

2. Article should include title, author's affiliation (incase of co-researchers involved), objectives of research of chosen subject, methodology adopted, sources etc., exhaustively along with a bio-data attached giving details of background of the research work done , contact address, e-mail id, phone no etc, of the applicant.

3. Each article to be appended with detailed notes, typed in double space, or 1.5 space; numbered serially and should not exceed 10,000 words (strictly). Article should not carry un-wanted paragraphs which is not related to research topic done by the candidate. The review article should not exceed 4,000 words. Article should specify its research objectives/goals and used methodology either separately or beginning of the Article. Primary and secondary source to be mentioned.

4. References should be typed at the end of article; Citations should appear alphabetically. Multiple citations for the same author are distinguished.

5. Style of reference to be in specific style like APA style, MLA style etc; depending upon the area of research. Figures and tables to be on separate sheets of paper and numbered.Article should use the langauge either Kannada or English.

*(continued to 25th page)*

## ಭರತನ ನಾಟ್ಯಶಾಸ್ತ್ರ, ಪುರಾಣ ಮತ್ತು ನಟುವಾಂಗದ ಕಲಿಕೆಯ ದಿಕ್ಕಿನಲ್ಲೊಂದು ಹೊಸ ಬೆಳಕು

ಕರ್ನಾಟಕದಲ್ಲಿ ಭರತನ ನಾಟ್ಯಶಾಸ್ತ್ರದ ಕುರಿತ ಶಾಸ್ತ್ರಾಧ್ಯಯನ ತರಗತಿಗಳು ನಡೆಯುವುದೇ ವಿರಳ. ಭಾರತೀಯ ಕಲೆಗಳೆಲ್ಲದಕ್ಕೂ ತಾಯಿಬೇರಾಗಿರುವ ಭರತನ ನಾಟ್ಯಶಾಸ್ತ್ರದ ಕಬ್ಬಿಣದ ಕಡಲೆಯಂತಿರುವ ಬೃಹತ್ ಸಂಪುಟಗಳನ್ನು ಓದಿ ಅರ್ಥೈಸಿಕೊಂಡು ಅಳವಡಿಸಿಕೊಳ್ಳುವುದೆಂದರೆ ಅಷ್ಟು ಸುಲಭವೂ ಅಲ್ಲ. ಇದರಿಂದಾಗಿ ನೃತ್ಯಾಸಕ್ತರಿಗೆ, ಅಧ್ಯಯನದ ಅಪೇಕ್ಷೆ ಉಳ್ಳವರಿಗೆ ಸಾಕಷ್ಟು ಹಿನ್ನಡೆಯೂ ಆಗುತ್ತಲಿದೆ. ಜೊತೆಗೆ ನಾಟ್ಯಶಾಸ್ತ್ರದ ಬಗ್ಗೆ ಅಲ್ಲಲ್ಲಿ ಮಿಂಚಿ ಮರೆಯಾಗುವ ಉಪನ್ಯಾಸಗಳು ಸರ್ವರಿಗೂ ಸಕಾಲಕ್ಕೆ ದೊರೆಯುವುದೂ ಇಲ್ಲ.

ಇದನ್ನು ಗಮನಿಸಿದ ನೃತ್ಯ ಸಂಶೋಧನೆ, ಅಧ್ಯಯನ, ದಾಖಲೀಕರಣಕ್ಕೆ ಸಂಬಂಧಿಸಿದಂತೆ ದುಡಿಯುತ್ತಿರುವ ಹಲವು ಪ್ರಥಮಗಳ ರೂವಾರಿ ನೂಪುರ ಭ್ರಮರಿ ಸಂಸ್ಥೆಯು ಭರತನ ನಾಟ್ಯಶಾಸ್ತ್ರದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ (ಥಿಯರಿ+ ಪ್ರಾಕ್ಟಿಕಲ್) ಸರ್ಟಿಫಿಕೇಟ್ ಕೋರ್ಸ್ ತರಗತಿಗಳನ್ನು ಕೆಲವು ತಿಂಗಳಿನ ಹಿಂದೆ ಆರಂಭಿಸಿದೆ. ಇದು ಶಾಸ್ತ್ರೀಯ–ಜಾನಪದವೆಂಬ ಬೇಧವಿಲ್ಲದೆ ವಿವಿಧ ಕಲಾವಿಭಾಗದ ಅಭ್ಯರ್ಥಿಗಳಿಗೆ ಅಂದರೆ ಸಬ್ ಜೂನಿಯರ್ ಹಂತದಿಂದ ಜೂನಿಯರ್, ಸೀನಿಯರ್, ವಿದ್ವತ್, ಪದವಿ, ಸ್ನಾತಕೋತ್ತರ ಪದವಿ ಮತ್ತು ವೃತ್ತಿಪರ ಕಲಾವಿದರಿಗಾಗಿ ಇದು ಹಲವು ಹಂತಗಳಲ್ಲಿ ವಿಭಾಗೀಕರಿಸಲ್ಪಟ್ಟಿದ್ದು ನಾಟ್ಯಶಾಸ್ತ್ರದ ಸಂಪೂರ್ಣ ಅಧ್ಯಯನ, ಕರಣ/ಚಾರಿಗಳ ಕಲಿಕೆಯನ್ನು ಒಳಗೊಂಡಿದೆ. ಭರತನಾಟ್ಯವಷ್ಟೇ ಅಲ್ಲದೆ, ಯಕ್ಷಗಾನ, ಜಾನಪದ ಕ್ಷೇತ್ರಗಳ ಸಹಿತ ವಿವಿಧ ಬಗೆಯ ನೃತ್ಯ, ನಾಟ್ಯ, ಸಂಗೀತ, ವಾದ್ಯಸಂಗೀತದ ಆಸಕ್ತರು ಪರಿಶೀಲಿಸಿ ಪಡೆಯಬಹುದಾದ ಪ್ರಬುದ್ಧಮಟ್ಟದ ತರಗತಿಗಳು ಇದಾಗಿವೆ ಎಂಬುದು ಇಲ್ಲಿನ ಹೆಚ್ಚುಗಾರಿಕೆ.

ಅಂತೆಯೇ ಭರತನಾಟ್ಯದ ನಟ್ಟುವಾಂಗ (ತಾಳ ನುಡಿಸಾಣಿಕೆ) ಸರ್ಟಿಫಿಕೇಟ್ ಕೋರ್ಸ್‌ಗಳನ್ನೂ ತೆರೆಯಲಾಗಿದ್ದು; ಇದೂ ಕೂಡಾ ನೃತ್ಯಪರಂಪರೆಯ ಆಳ ಕಲಿಕೆಗೆ ವಿನೂತನವಾದ ಪ್ರಯತ್ನ. ಬಹುತೇಕ ನೃತ್ಯಶಾಲಾ–ಕಾಲೇಜುಗಳ ಸಂದರ್ಭಗಳಲ್ಲಿ, ನಟುವಾಂಗ ಕಲಿಯಲು ಸೂಕ್ತ ಕ್ರಮಗಳಾಗಲೀ, ಪಠ್ಯವಿಧಾನಗಳಾಗಲೀ ಇಲ್ಲದೆ ತಾಳ, ಲಯದ ಪರಿಚಯವೇ ಕಳೆಗುಂದುತ್ತಿರುವ ಹೊತ್ತಿಗೆ ಇದೊಂದು ಅಪೂರ್ವ ಅವಕಾಶವಾಗಿದೆ. ಇದರೊಂದಿಗೆ

**ಪ್ರದರ್ಶನ ಕಲೆಗಳ ಸಂಶೋಧನಾಸಕ್ತರಿಗಾಗಿ ಸಂಶೋಧನಾ ತರಗತಿ,**
**ವಿವಿಧ ಶಾಸ್ತ್ರಗ್ರಂಥಗಳ ಅಧ್ಯಯನ ತರಗತಿ, ಪುರಾಣ ಕಥೆಗಳ ತರಗತಿ,**
**ಸಾಂಸ್ಕೃತಿಕ ಪತ್ರಿಕೋದ್ಯಮ (ಕಲೆಯ ಬರೆವಣಿಗೆ, ವಿಮರ್ಶೆ, ಲೇಖನ, ಸಂದರ್ಶನ)**
**ನೃತ್ಯದ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಹಂತದ ತರಬೇತಿಯಲ್ಲಿ ಮಸುಕಾಗುತ್ತಿರುವ**
**ಶಾಸ್ತ್ರವಿಭಾಗಕ್ಕೆಂದೇ ಪ್ರತ್ಯೇಕ ಕಲಿಕಾ ತರಗತಿಗಳನ್ನೂ** ನಡೆಸಲಾಗುತ್ತಿದೆ.

ಈ ತರಗತಿಗಳೆಲ್ಲವೂ ಅಭ್ಯರ್ಥಿಗಳ ಆಯ್ಕೆಯ ಮೇರೆಗೆ ಒಂದೋ ಮುಖಾಮುಖಿ ಅಥವಾ ಆನ್‌ಲೈನ್‌ನಲ್ಲಿ ಹಮ್ಮಿಕೊಳ್ಳುವಂತದ್ದಾಗಿದ್ದು; ಈಗಾಗಲೇ ಕರ್ನಾಟಕ, ಹೊರರಾಜ್ಯ ಮತ್ತು ವಿದೇಶಗಳಿಂದಲೂ ಆಸಕ್ತರು ಈ ವಿಶೇಷ ಕೋರ್ಸ್‌ಗಳನ್ನು ಕಲಿಯಲು ಬರುತ್ತಿದ್ದಾರೆ. ಅಂತೆಯೇ ಕಾರ್ಯಾಗಾರಗಳನ್ನೂ ನಡೆಸುವಂತೆ ಈ ತರಗತಿಗಳನ್ನು ವಿನ್ಯಾಸ ಮಾಡಲಾಗಿರುವುದು ವಿಶೇಷ.

ತರಗತಿಗಳನ್ನು ಕೋರ್ಸಿನ ಕ್ರಮದಲ್ಲಿ ವಿನ್ಯಾಸ ಮಾಡಲಾಗಿದ್ದು, ಇವು ಕರ್ನಾಟಕದ ನೃತ್ಯಕ್ಷೇತ್ರದಲ್ಲೇ ವಿನೂತನವಾದ ಬಹುಬೇಡಿಕೆಯವಾಗಿವೆ. ಸದ್ಯ ಪುತ್ತೂರು, ಬೆಂಗಳೂರಿನಲ್ಲಿ ಮುಖಾಮುಖಿ ತರಗತಿಗಳನ್ನು ನಡೆಸಲಾಗುತ್ತಿದ್ದು; ಮುಂದಿನ ದಿನಗಳಲ್ಲಿ ರಾಜ್ಯದ ಬೇರೆ ಭಾಗಗಳಿಗೂ ವಿಸ್ತರಿಸಲಾಗುವುದು. ಕೇವಲ ನೃತ್ಯವಿದ್ಯಾರ್ಥಿಗಳಷ್ಟೇ ಅಲ್ಲದೆ, ಯಾವುದೇ ಕಲೆಯ ಯಾವುದೇ

3rd Cover



ವಿಭಾಗದ ಆಸಕ್ತರೂ ಅಥವಾ ಸಾರ್ವಜನಿಕ ಪ್ರೇಕ್ಷಕರೂ, ಪೋಷಕರೂ ಈ ತರಗತಿಗಳನ್ನು ತೆಗೆದುಕೊಳ್ಳುವಂತೆ ವಿನ್ಯಾಸ ಮಾಡಲಾಗಿದೆ. ಹಾಗಾಗಿ ಸಂಶೋಧನಾ ವಿದ್ಯಾರ್ಥಿಗಳಿಂದ ಮೊದಲ್ಗೊಂಡು ಸಬ್‌ಜೂನಿಯರ್ ಹಂತದ ವರೆಗೂ ವಿದ್ಯಾರ್ಥಿಗಳು ಸೇರ್ಪಡೆಯಾಗಿದ್ದಾರೆ. ಅಭ್ಯರ್ಥಿಗಳ ವಯೋಮಾನ, ಬೌದ್ಧಿಕಮಟ್ಟ, ಮಾನಸಿಕ ಪ್ರಬುದ್ಧತೆ, ತಿಳಿವಳಿಕೆಗಳಿಗನುಗುಣವಾಗಿ ಸ್ವತಃ ಅಭ್ಯರ್ಥಿಗಳೇ ಸ್ವಯಂ ಆಸಕ್ತಿಯಿಂದ ತೊಡಗಿಸಿಕೊಳ್ಳುವಂತೆ ಪಾಠ–ಪ್ರಯೋಗಗಳು ನಡೆಯುವುದು ಇಲ್ಲಿನ ಮುಖ್ಯ ಲಕ್ಷಣ. ಅದರಲ್ಲೂ ಮಕ್ಕಳ ಪ್ರಪಂಚದಲ್ಲಿ ಅಪರೂಪವಾಗುತ್ತಿರುವ ಭಾರತೀಯ ಪರಂಪರೆಯ ಸೂಕ್ಷ್ಮಗಳನ್ನೂ, ಕಥೆಗಳನ್ನೂ ಗುರುಕುಲಸಂಪ್ರದಾಯದಂತೆ ಜೊತೆಜೊತೆಗೆ ತಿಳಿಸುತ್ತಾ ಸಂಸ್ಕಾರ ಉದ್ದೀಪನಗೊಳಿಸುವತ್ತ ಕೆಲಸ ಪ್ರಧಾನವಾಗಿ ಸಾಗುತ್ತಲಿದೆ. ಚಿಕ್ಕಮಕ್ಕಳಿಗೂ ಸ್ವಯಂ ಕೊರಿಯೋಗ್ರಫಿ ಮಾಡಿಕೊಳ್ಳುವಂತೆ ಮನೋಧರ್ಮದ ನಾಟ್ಯಶಾಸ್ತ್ರದ ಇನ್ನು ಕೆಲವೇ ಪ್ರವೇಶ ದಾಖಲಾತಿಗಳಿಗೆ ಅನುಕೂಲ ಇದರಲ್ಲಿದೆ. ಇದರಿಂದ ಎಷ್ಟೋ ಮಕ್ಕಳು ತರಗತಿಯ ಬಳಿಕವೂ ಎಷ್ಟು ಉತ್ಸಾಹಿತರಾಗಿರುತ್ತಾರೆಂದರೆ ಮತ್ತದೇ ತರಗತಿಯ ಗುಂಗಿನಲ್ಲಿ ಕುಳಿತು ಮಾರ್ಗದರ್ಶಕರಲ್ಲಿ ಸಂವಾದ ನಡೆಸುತ್ತಾರೆ. ಮುಂದೆ ನಾಟ್ಯಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿ ತೋರಿದರೆಂದಾದರೆ 108 ಕರಣಾಭ್ಯಾಸದ ಪ್ರಾಯೋಗಿಕ ತರಗತಿಗಳನ್ನು ಕಲಿಸಲು ವ್ಯವಸ್ಥೆ ಮಾಡಲಾಗುತ್ತದೆ. ಅಂತಿಮವಾಗಿ ಕೆಲವು ಪರೀಕ್ಷೆಗಳನ್ನು ನಡೆಸಿ ಅವರ ಭವಿಷ್ಯಕ್ಕೆ ಉಪಯೋಗವಾಗುವಂತೆ ಅರ್ಹತಾ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ.

'ಈ ಕೋರ್ಸ್‌ಗೆ ಸೇರಿದ ಕೆಲವೇ ಕೆಲವು ತರಗತಿಗಳಲ್ಲಿಯೇ ವಿದ್ಯಾರ್ಥಿಗಳಲ್ಲಿ ಗಮನಾರ್ಹ ಬದಲಾವಣೆ ಗೋಚರಿಸುತ್ತಿದೆ. ಅವರ ನೃತ್ಯಕಲಿಕೆ, ಗ್ರಹಿಕೆ ಮತ್ತು ಪ್ರದರ್ಶನದಲ್ಲಿ ಮನೋಧರ್ಮದ ಬೆಳವಣಿಗೆಯಾಗಿದೆ. ತರಗತಿಯನ್ನು ಒಂದರೆಕ್ಷಣವೂ ತಪ್ಪಿಸಿಕೊಳ್ಳದಷ್ಟು ಉತ್ಸಾಹ ಕಂಡುಬರುತ್ತಿದೆ. ಸ್ವತಃ ತಮ್ಮ ನೃತ್ಯಗಳನ್ನು ತಾವೇ ವಿನ್ಯಾಸ ಮಾಡುವಷ್ಟು ಪ್ರಬುದ್ಧತೆ ತೋರುತ್ತಿದ್ದಾರೆ. ಅಷ್ಟೇ ಅಲ್ಲ, ಪೋಷಕರೂ ಕೂಡಾ ಮಕ್ಕಳ ವರ್ತನೆ ಮತ್ತು ವ್ಯಕ್ತಿತ್ವದಲ್ಲಿ ಗುಣಾತ್ಮಕ ಬದಲಾವಣೆಗಳನ್ನು ಗ್ರಹಿಸಿ ಸಂತೋಷ ವ್ಯಕ್ತಪಡಿಸುತ್ತಿದ್ದಾರೆ. ಇದು ಶಾಲಾ–ಕಾಲೇಜಿನ ಕಲಿಕೆ ಹಾಗೂ ಸ್ಪರ್ಧಾದಿಗಳಿಗೂ ಉಪಯುಕ್ತವಾಗುತ್ತಿದೆ ಎಂಬ ಪ್ರತಿಕ್ರಿಯೆಗಳೂ ದೊರಕುತ್ತಿರುವುದು ಮತ್ತೊಂದು ಸಂತೋಷದ ವಿಷಯ' ಎಂದು ಕೋರ್ಸ್‌ಗಳನ್ನು ಸ್ವಾಗತಿಸಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಪುತ್ತೂರಿನ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯ ವಿದ್ವಾನ್ ಬಿ.ದೀಪಕ್ ಕುಮಾರ್.

(**continued from 23rd page**)

6. Copyright Permission for charts, pictures and photographs from other published works to be mentioned. Photos and charts ( if sending through mail) should be in proper high resolution. Photos to be sent by Author of Article. No substitute.

7. Credits/acknowledgements to be given properly. No repetition in the subject is encouraged. If such cases are seen, immediately the paper will be withheld.

8. Personal meddling with the selection process is totally discouraged. However, those desirous of availing guidance can contact the editorial committee. The articles on new ideas which contributes for the tradition and performance of dance also welcome. But it should fulfill the need of the concepts/topic.

9. Decision of the Selection committee will be final. The sub-standard papers will be rejected.

10. Donation are accepted at utmost gratitude and acknowledged in journal on their sponsorship category.Account Number details : Federal bank Ltd, Puttur. Noopura Bhramari- 18940100002234 ;IFSC code : FDRL0001894. All correspondence, enquiry is addressed to the Noopura Bhramari (R.)

# 2nd Cover

## ಚಂದಾ ವಿವರ

ನೂಪುರ ಭ್ರಮರಿ ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆ. ಆದರೆ ಇದರರ್ಥ ಈ ಪತ್ರಿಕೆ ಉಚಿತವಾಗಿ ಹಂಚಲ್ಪಡುತ್ತದೆ ಎಂದಲ್ಲ. ಪತ್ರಿಕೆ, ಪ್ರತಿಷ್ಠಾನಕ್ಕೆ ಬೇರಾವುದೇ ಆದಾಯಮೂಲಗಳಿಲ್ಲ. ಅದನ್ನು ಅರಿತು ಓದುಗರು ಖರ್ಚು–ವೆಚ್ಚಗಳನ್ನು ಸರಿದೂಗಿಸಲು ಅನುಕೂಲ ಮಾಡಿಕೊಟ್ಟರೆ ಆಭಾರಿಗಳಾಗುತ್ತೇವೆ.

ಅಷ್ಟಕ್ಕೂ ಪ್ರಾರಂಭಿಕ ವರ್ಷಗಳಿಂದಲೂ ಚಂದಾ ವಿವರ ಕಡ್ಡಾಯವಾಗಿರಲಿಲ್ಲ; ಎಷ್ಟೋ ಬಾರಿ ಸಂಚಿಕೆಗಳನ್ನು ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಪತ್ರಿಕೆಗೆ ಅದರದ್ದೇ ಆದ ಜವಾಬ್ದಾರಿ, ಸಮಸ್ಯೆಗಳಿರುವ ಕಾರಣ ಉಚಿತವಾಗಿ ಕಳಿಸಿಕೊಡುವುದು ಅಥವಾ ಗೌರವಪ್ರತಿ ನೀಡುವುದು ಎಲ್ಲಾ ಸಂದರ್ಭದಲ್ಲಿ ಸಾಧ್ಯವಿಲ್ಲ.

ಆದ್ದರಿಂದ ಕೆಳಕಂಡ ಚಂದಾವಿವರಗಳನ್ನು ಲಕ್ಷಿಸಿ 'ಸಂಪಾದಕರು, ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ ಮನಿಯಾರ್ಡರ್/ಮನಿ ಟ್ರಾನ್ಸ್ಫರ್‌ನಲ್ಲಿ ಮೊತ್ತವನ್ನು ಕಳಿಸಬೇಕೆಂದು ಕೋರುತ್ತೇವೆ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್ ಕಮಿಷನ್ ಮೊತ್ತ 40/–ರೂ ಹೆಚ್ಚಿಗೆ ಸೇರಿಸಿ ಕಳಿಸಬೇಕೆಂದು ಮನವಿ.

ಆಜೀವ ಸದಸ್ಯರಾದಲ್ಲಿ ಅಥವಾ ಮುದ್ರಣ ನಿಧಿಗೆ ಸಹಕರಿಸಿದವರಿಗೆ ಸದಸ್ಯತ್ವದ ದಿನಾಂಕದಿಂದ ಮೊದಲ್ಗೊಂಡು ಆಜೀವ ಪರ್ಯಂತ ಪತ್ರಿಕೆಯನ್ನು ಕಳಿಸಿಕೊಡಲಾಗುವುದು. ಆಜೀವ ಸದಸ್ಯರು/ಮಹಾಪೋಷಕರು ಪತ್ರಿಕೆಯ ಒಟ್ಟಾರೆ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಕೈಜೋಡಿಸಬಹುದು. ಅಂತೆಯೇ ಆಸಕ್ತ ಸದಸ್ಯರು ಜಿಲ್ಲಾ ಕೇಂದ್ರಗಳಲ್ಲಿ ಪತ್ರಿಕೆ ಮತ್ತು ಅದರ ಸಂಬಂಧಿತ ಅಂಗಸಂಸ್ಥೆಗಳ ಕಾರ್ಯಕ್ರಮದ ಮೇಲ್ವಿಚಾರಕರಾಗಬಹುದು.

**Bank Details : The Federal Bank Limited, Puttur**
**IFSC Code - FDRL0001894**
**Account Number : Noopura Bhramari 18940100002234;**

ವಾರ್ಷಿಕ ಚಂದಾ : 150 ರೂ/– ದಶವರ್ಷ ಸದಸ್ಯತ್ವ : 1000 ರೂ
ಮುದ್ರಣ ನಿಧಿ ಸಹಾಯ ಧನ : 3,500 (ಪೋಷಕ) ; 5,000 (ಮಹಾಪೋಷಕ)

## ಮುದ್ರಾರ್ಣವ

ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಾಣುವ 1000ಕ್ಕೂ ಮಿಗಿಲು ಹಸ್ತ –ಮುದ್ರೆಗಳ ಕುರಿತಾದ ; ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖಿ ಚಿಂತನೆಯ ಸಂದರ್ಶನ–ಸಮೀಕ್ಷೆ–ಪುರಾತನ ಗ್ರಂಥ ಪರಾಮರ್ಶನ ಹೊಂದಿದ ವಿದ್ವಾಂಸರ ಮನ್ನಣೆ ಪಡೆದ ಮನೋರಮಾ ಅವರ ಸಂಶೋಧನಾ ಕೃತಿ. ಬೆಲೆ : 250/– ರೂ.

---

## ನೃತ್ಯ ಮಾರ್ಗ ಮುಕುರ

ಮನೋರಮಾ ಬಿ.ಎನ್. ಬರೆದ; ಭರತನಾಟ್ಯದ ಮಾರ್ಗಪದ್ಧತಿಯ ಮಜಲು, ನೃತ್ಯಬಂಧಗಳ ಇತಿಹಾಸವೀಯುವ ನೃತ್ಯಪರೀಕ್ಷೆಗಳಿಗೆ, ಸಂಶೋಧನೆಗಳಿಗೆ ಅನುಕೂಲವಾಗುವ ಗುರು ಮತ್ತು ವಿದ್ಯಾರ್ಥಿಗಳ ಮೆಚ್ಚಿನ ಕೃತಿ. ಬೆಲೆ: 125ರೂ.

---

## ಮಹಾಮುನಿ ಭರತ

ಮನೋರಮಾ ಬಿ.ಎನ್. ಬರೆದ; ನಾಟ್ಯಶಾಸ್ತ್ರದ ಕರ್ತೃ ಭರತಮುನಿಯ ಕುರಿತ ನೃತ್ಯ ಮತ್ತು ಸಾಹಿತ್ಯ ಆಸಕ್ತರಿಗೆ ಅಧ್ಯಯನ ಅನುಕೂಲಿಯಾದ ಕಿರು ಕೃತಿ. ಬೆಲೆ : 80ರೂ. ಶ್ರೀ ಭಾರತೀ ಪ್ರಕಾಶನದಿಂದ ಪ್ರಕಟಿತ. ಕೆಲವೇ ಪ್ರತಿಗಳು ಉಳಿದಿವೆ.

## ನೂಪುರಾಗಮ

*ಭಾರತದ ಪ್ರಥಮ ನೃತ್ಯ ಸಂಶೋಧನ ನಿಯತಕಾಲಿಕೆ.*
ಪ್ರತಿಷ್ಠಿತ ISSN No. ನೋಂದಣಿ ಸಂಖ್ಯೆ ಪಡೆದ ವಿದ್ವಲ್ಲೋಕದ ಅಪೂರ್ವ ವ್ಯಕ್ತಿಗಳ ಲೇಖನ ಸಂಗ್ರಹದ 200 ಪುಟಗಳ ಕೃತಿ. ಬೆಲೆ : 200 ರೂ. ಕೆಲವೇ ಪ್ರತಿಗಳು ಉಳಿದಿವೆ. ಆಸಕ್ತರು ಸಂಪರ್ಕಿಸಿ.